ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ವಿಶ್ವದ ಅತಿದೊಡ್ಡ ಲಸಿಕಾ ಅಭಿಯಾನ ಕೈಗೊಂಡಿರುವ ಭಾರತದಲ್ಲಿ ಕೋವಿಡ್ ಲಸಿಕೆ ವ್ಯಾಪ್ತಿ 115 ಕೋಟಿ 73 ಲಕ್ಷದ ಗಡಿ ದಾಟಿದೆ. ಒಟ್ಟು ವ್ಯಾಕ್ಸಿನೇಷನ್‌ನಲ್ಲಿ 76 ಕೋಟಿ 19 ಲಕ್ಷಕ್ಕೂ ಹೆಚ್ಚು ಲಸಿಕೆ ಡೋಸ್‌ಗಳನ್ನು ಮೊದಲ ಡೋಸ್ ಆಗಿ ನೀಡಲಾಗಿದ್ದು, 39 ಕೋಟಿ 54 ಲಕ್ಷಕ್ಕೂ ಹೆಚ್ಚು ಡೋಸ್‌ಗಳನ್ನು ಎರಡನೇ ಡೋಸ್ ಆಗಿ ನೀಡಲಾಗಿದೆ.

ಸಂಪುಟ : 43 | ಸಂಚಿಕೆ : 08 | ಪ್ಲವ – ಕಾರ್ತಿಕ | ಕಲಿಯುಗಾಬ್ದ 5123 | 01-12-2021 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಭಾರತೀಯ ಕಾಲಗಣನೆ – ನಿತ್ಯಜೀವನದಲ್ಲಿ ಬಳಸುವ ಪಂಚಾಂಗ ಎಂಬ ವಿಜ್ಞಾನ

ಭಾರತ ಜ್ಞಾನ, ವಿಜ್ಞಾನ, ಕಲೆ, ಸಾಹಿತ್ಯ, ಸಂಗೀತ, ಕಾವ್ಯ ಮೊದಲಾದವುಗಳ ಮೂಲ ನೆಲೆ. ಇಲ್ಲಿಯ ಸಂಸ್ಕೃತಿಯು ಇವೆಲ್ಲವನ್ನೂ ಪೋಷಿಸುತ್ತದೆ ಎಂಬುದೇ ವಿಶೇಷ. ಪ್ರತಿನಿತ್ಯದ ಚಟುವಟಿಕೆಗಳಲ್ಲಿ ಇಂಥ ಅನೇಕ ವಿಷಯಗಳನ್ನು ನೆನಪಿಸುವ ಅಂಶಗಳಿವೆ. ಅಂಥ ಅಂಶಗಳಲ್ಲಿ ಪ್ರತಿನಿತ್ಯವೂ ಹೇಳುವಂಥ ಸಂಕಲ್ಪವೂ ಒಂದು. ಅದರಲ್ಲಿ ನಾವು ನಮ್ಮ ದೇಶವನ್ನು ಭೌಗೋಳಿಕವಾಗಿ ಗುರುತಿಸುತ್ತ, ಕಾಲದ ದೃಷ್ಟಿಯಿಂದ ಆ ದಿನದ ವಿಶೇಷವನ್ನು ಹೇಳುವ ಪರಿಪಾಠ ಅನೇಕ ಮನೆಗಳಲ್ಲಿ, ಎಲ್ಲ ದೇವಸ್ಥಾನಗಳಲ್ಲಿಯೂ ಇದೆ. ದಿನದ ವಿಶೇಷವು ಕಾಲಕ್ಕೆ ಸಂಬಂಧಿಸಿದ್ದು. ಭಾರತದಲ್ಲಿ ಕಾಲಕ್ಕೆ ಕೊಟ್ಟಿರುವ ಸ್ಥಾನ ಮಹತ್ವದ್ದು. ಎಲ್ಲಕ್ಕೂ ಶುಭಮುಹೂರ್ತಗಳನ್ನು ಹುಡುಕುವ ನಾವು, ಆ ಸಮಯವನ್ನು ನಿಖರವಾದ ನಿಮಿಷಗಳಿಗೆ ಗುರುತಿಸುತ್ತೇವೆ. (ಉದಾಃ ಮದುವೆಯ ಆಮಂತ್ರಣದಲ್ಲಿ 10.37 ರಿಂದ 11.03 ನಿಮಿಷಗಳ ಒಳಗೆ ಸಲ್ಲುವ ಲಗ್ನದಲ್ಲಿ ಎಂದು ತಿಳಿಸುವುದು ಸರ್ವೇಸಾಮಾನ್ಯ) ಹಾಗಾದರೆ ಈ ಕಾಲಮಾನಕ್ಕೆ ಆಧಾರವೇನು ? ಇದರ ಅಂಶಗಳೇನು ? ಎಂಬ ಕುತೂಹಲ ಸಹಜವೇ.

ಸೂರ್ಯ, ಚಂದ್ರ, ನಕ್ಷತ್ರ, ಬೃಹಸ್ಪತಿ (ಗುರು ಗ್ರಹ) ಮೊದಲಾದ ಆಕಾಶ ಕಾಯಗಳ ಚಲನೆಯ ಆಧಾರದ ಮೇಲೆ ಕಾಲವನ್ನು ಎಣಿಸುವ ಪದ್ಧತಿ ನಮ್ಮ ದೇಶದಲ್ಲಿ ಅನೇಕ ಸಹಸ್ರ ಮಾನಗಳಿಂದ ಬಂದಿದೆ. ಸೂರ್ಯನ ಚಲನೆಯ ಆಧಾರದ ಮೇಲೆ ಕಾಲವನ್ನು ಗಣಿಸುವ ಕ್ರಮವನ್ನು ಸೌರಮಾನ ಎಂದರೆ ಚಂದ್ರನ ಚಲನೆಗೆ ಸಂಬಂಧಿಸಿದ್ದು ಚಾಂದ್ರಮಾನ. ಅಂತೆಯೇ ನಾಕ್ಷತ್ರಮಾನ, ಬಾರ್ಹಸ್ಪತ್ಯ ಮೊದಲಾದವು. ಹೆಚ್ಚು ಪ್ರಚಲಿತವಿರುವುದು ಮೊದಲೆರಡು ಮಾತ್ರ.


ಚಾಂದ್ರಮಾನ ಪದ್ಧತಿಯ ವೈಶಿಷ್ಟ್ಯ – ಆಕಾಶದಲ್ಲಿ ಒಟ್ಟು 27 ನಕ್ಷತ್ರಪುಂಜಗಳನ್ನು ನಮ್ಮ ಪ್ರಾಚೀನ ಋಷಿಮುನಿಗಳು ಗುರುತಿಸಿದ್ದಾರೆ. ಅವುಗಳಿಗೆ ಕ್ರಮವಾಗಿ ಅಶ್ವಿನೀ, ಭರಣಿ ಮೊದಲಾದ ಹೆಸರುಗಳನ್ನು ನೀಡಿದ್ದಾರೆ. ಪ್ರತಿ ನಕ್ಷತ್ರಕ್ಕೂ 4 ಪಾದಗಳು. ಅಂದರೆ ಒಟ್ಟು 108 ನಕ್ಷತ್ರ ಪಾದಗಳಿವೆ ಎಂದಾಯಿತು. ಇವೆಲ್ಲವೂ ಒಂದು ಕಾಲ್ಪನಿಕ ಚಕ್ರದಲ್ಲಿದ್ದು ಅದನ್ನು ರಾಶಿಚಕ್ರ ಎಂದು ಕರೆಯಲಾಗುತ್ತದೆ. ಚಕ್ರವೆಂದ ಮೇಲೆ 360 ಡಿಗ್ರಿ. ಒಂದು ನಕ್ಷತ್ರದ ಪ್ರಮಾಣವು ಅದರಲ್ಲಿ 13 ಡಿಗ್ರಿ 20 ಮಿನಿಟ್ ಆಗಿರುತ್ತದೆ.

ಭೂಮಿಯು ಸೂರ್ಯನ ಸುತ್ತಲೂ ಹೇಗೆ ಪ್ರದಕ್ಷಿಣೆ ಮಾಡುತ್ತದೆಯೋ, ಹಾಗೆಯೇ ಚಂದ್ರನೂ ಕೂಡ ಭೂಮಿಯ ಸುತ್ತಲೂ ಪ್ರದಕ್ಷಿಣೆ ಬರುತ್ತಾನೆ. ಚಂದ್ರನ ಚಲನೆಯ ಆಧಾರದ ಮೇಲೆ ಕಾಲವನ್ನು ಲೆಕ್ಕ ಮಾಡುವುದರಿಂದ, ಚಾಂದ್ರಮಾನ ಕಾಲಗಣನಾ ಪದ್ಧತಿ ಎಂದು ಹೇಳಲಾಗುತ್ತದೆ.

### ಪಂಚಾಂಗ ಎಂದರೇನು?

ದಿನವನ್ನು ಐದು ಅಂಶಗಳ ಆಧಾರದ ಮೇಲೆ ನಿರ್ಧರಿಸಬಹುದು. ಅವುಗಳನ್ನು ಪಂಚಾಂಗ ಎಂದು ಕರೆಯಲಾಗಿದೆ. ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣಗಳೇ ಈ ಪಂಚಾಂಗಗಳು. ಇವುಗಳಲ್ಲಿ ತಿಥಿ, ವಾರ, ನಕ್ಷತ್ರಗಳು ಪ್ರಾಮುಖ್ಯವನ್ನು ಪಡೆದಿವೆ. ಚಂದ್ರನು ಸಾಮಾನ್ಯವಾಗಿ 27 1/3 ದಿನಗಳಲ್ಲಿ ಇಡೀ ಭೂಮಿಯನ್ನು ಸುತ್ತುತ್ತಾನೆ. ಅಂದರೆ ದಿನಕ್ಕೊಂದು ನಕ್ಷತ್ರವನ್ನು ಕ್ರಮಿಸುವನು. ಚಂದ್ರ ಮತ್ತು ಭೂಮಿ ಎರಡೂ ಕೂಡ ಚಲನೆಯಲ್ಲಿರುವುದರಿಂದ ಕೆಲವು ದಿನ ಒಂದೇ ದಿನದಲ್ಲಿ ಎರಡು ನಕ್ಷತ್ರಗಳಿದ್ದರೆ, ಕೆಲವು ಸಂದರ್ಭಗಳಲ್ಲಿ ಎರಡು ದಿನಗಳಿಗೆ ಒಂದೇ ನಕ್ಷತ್ರವಿರುತ್ತದೆ. ಅದಕ್ಕೆ, 'ಇಂದಿನ ನಕ್ಷತ್ರ' ಎಂದಾಗ ಸಾಮಾನ್ಯವಾಗಿ ಅದು ಚಂದ್ರನು ಇರುವ ನಕ್ಷತ್ರವೆಂದು ತಿಳಿಯಬೇಕು.

ಚಂದ್ರನು ಭೂಮಿಯ ಸುತ್ತ ಪರಿಭ್ರಮಿಸುವ ಕಾಲ 27 1/3 ದಿನಗಳು ಎಂಬುದನ್ನು ತಿಳಿದಾಗಿದೆ. ಲೆಕ್ಕಕ್ಕೆ ಈಗ ಮೂವತ್ತು ದಿನಗಳು ಎಂದು ತಿಳಿಯೋಣ. ಅಂದರೆ ಪ್ರತಿದಿನವೂ ಕೂಡ ಒಂದು ತಿಥಿ. ಅಂದರೆ ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥೀ (ಸಾಮಾನ್ಯವಾಗಿ ಇದನ್ನು ಪಾಡ್ಯ, ಬಿದಿಗೆ, ತದಿಗೆ, ಚೌತಿ ಎಂದು




ವ್ಯವಹರಿಸುತ್ತೇವೆ), ಪಂಚಮೀ, ಷಷ್ಠಿ, ಸಪ್ತಮೀ, ಅಷ್ಟಮೀ, ನವಮೀ, ದಶಮೀ, ಏಕಾದಶೀ, ದ್ವಾದಶೀ, ತ್ರಯೋದಶೀ, ಚತುರ್ದಶೀ ಮತ್ತು ಪೂರ್ಣಿಮಾ/ಅಮಾವಾಸ್ಯೆ ಎಂದು. ಭೂಮಿಯು ಸೂರ್ಯನ ಸುತ್ತ ಸುತ್ತುತ್ತಿದ್ದರೆ, ಚಂದ್ರನು ಭೂಮಿಯ ಸುತ್ತ ಸುತ್ತುತ್ತಿದ್ದಾನೆ ಎಂಬುದನ್ನು ಅರಿತಿದ್ದೇವೆ. ಸೂರ್ಯನ ಬೆಳಕು ಚಂದ್ರನ ಮೇಲೆ ಬಿದ್ದು, ಆ ಬೆಳಕು ಭೂಮಿಗೆ ಗೋಚರಿಸುತ್ತದೆ. ಅದನ್ನು ಚಂದ್ರ ಕಲೆ ಎಂದು ಕರೆಯಲಾಗಿದೆ.

ಸೂರ್ಯನ ಮತ್ತು ಭೂಮಿಯ ಜೊತೆಗೆ ಸಮಾನಾಂತರ ರೇಖೆಯಲ್ಲಿ ಯಾವ ದಿನ ಚಂದ್ರನು ಇರುತ್ತಾನೋ (ಭೂಮಿ ಮತ್ತು ಸೂರ್ಯರ ನಡುವೆ) ಅಂದು ಅಮಾವಾಸ್ಯೆ. ಅಂದರೆ ಅಂದು ಸೂರ್ಯನ ಬೆಳಕು ಚಂದ್ರನ ಇನ್ನೊಂದು ಪಾರ್ಶ್ವಕ್ಕೆ ಬಿದ್ದು, ಭೂಮಿಗೆ ಚಂದ್ರನು ಕಾಣದಾಗುತ್ತಾನೆ. ಚಂದ್ರನು ಪ್ರತಿದಿನವು ಚಲನೆಯಲ್ಲಿರುವುದರಿಂದ ಮುಂದಿನ ಕಾಲಘಟ್ಟದಲ್ಲಿ 12 ಡಿಗ್ರಿ ಚಲಿಸಿದಾಗ ಅದು ಮೊದಲ ತಿಥಿ ಅಂದರೆ ಪಾಡ್ಯ ಎಂದು ಪರಿಗಣಿತವಾಗುತ್ತದೆ. ಸಂಪೂರ್ಣವಾಗಿ ಕಾಣೆಯಾಗಿದ್ದ (!) ಚಂದ್ರನ ಒಂದು ಭಾಗ ಮಾತ್ರ ಬೆಳಕಿನಿಂದ ಕೂಡಿರುತ್ತದೆ. ಅಂತೆಯೇ ಮುಂದೆ ಮುಂದೆ ಚಲಿಸುತ್ತ ಚಂದ್ರನ ಬೆಳಕು ಹೆಚ್ಚುತ್ತ ಹೋಗುತ್ತದೆ. ಅದು ಮೇಲೆ ಹೇಳಿದ 14 ತಿಥಿಯಾಗುತ್ತದೆ. ಯಾವ ದಿನ ಸೂರ್ಯ–ಭೂಮಿ–ಚಂದ್ರರು ಕ್ರಮವಾಗಿ 180 ಡಿಗ್ರಿಯಲ್ಲಿ ಇರುತ್ತವೆಯೋ ಅಂದು ಸೂರ್ಯನ ಬೆಳಕು ಚಂದ್ರನಿಂದ ಪೂರ್ಣವಾಗಿ ಭೂಮಿಗೆ ಕಾಣಿಸುತ್ತದೆ. ಅಂದಿನ ತಿಥಿ ಪೌರ್ಣಮೀ ಅಥವಾ ಹುಣ್ಣಿಮೆ. ಹೀಗೆ ಅಮಾವಾಸ್ಯೆಯಿಂದ ಪೌರ್ಣಮಿಯವರೆಗೆ ಇರುವ 15 ದಿನಗಳಲ್ಲಿ ಚಂದ್ರನ ಬೆಳಕು ಹೆಚ್ಚುತ್ತಾ ಹೋಗುವುದರಿಂದ ಅದನ್ನು ಶುಕ್ಲಪಕ್ಷ ಎಂದು ಕರೆಯುತ್ತೇವೆ. (ಇಲ್ಲಿ ಪಕ್ಷ ಎಂದರೆ 15 ದಿನಗಳ ಕಾಲಖಂಡ ಎಂದು).

ಅಂತೆಯೇ ಹುಣ್ಣಿಮೆಯಿಂದ ಆರಂಭಗೊಂಡು ಅಮಾವಾಸ್ಯೆಯವರೆಗೆ 15 ದಿನಗಳಲ್ಲಿ ಚಂದ್ರನು ಒಂದೊಂದು ಭಾಗದಷ್ಟನ್ನು ಕಳೆದುಕೊಳ್ಳುತ್ತ ಹೋಗುತ್ತಾನೆ. ಈ 15 ದಿನಗಳನ್ನು ಕೃಷ್ಣಪಕ್ಷ ಎಂದು ಕರೆಯಲಾಗಿದೆ. ಅಂದರೆ 360 ಡಿಗ್ರಿ ಕ್ರಮಿಸಲು ಚಂದ್ರನಿಗೆ ಸುಮಾರು 30 ದಿನಗಳ ಅವಶ್ಯಕತೆಯಿರುತ್ತದೆ. ಇದನ್ನು ನಾವು ತಿಂಗಳು ಅಥವಾ ಮಾಸ ಎಂದು ಕರೆಯುತ್ತೇವೆ. ಆದರೆ ಚಂದ್ರನ ಜೊತೆಗೆ ಭೂಮಿಯೂ ಚಲಿಸುತ್ತಿರುವುದರಿಂದ ಕೆಲವು ದಿನ ಒಂದೇ ದಿನ ಎರಡು ತಿಥಿಗಳು ಅಥವಾ ಎರಡು ದಿನಗಳಿಗೆ ಒಂದೇ ತಿಥಿಗಳೂ ಬರುತ್ತವೆ.

ಮೊದಲೇ ತಿಳಿಸಿದಂತೆ 27 ನಕ್ಷತ್ರಗಳಲ್ಲಿಯೂ ಚಂದ್ರನ ಚಲನೆಯಿರುತ್ತದೆ. ಸಾಮಾನ್ಯವಾಗಿ ಹುಣ್ಣಿಮೆಯಂದು ಚಂದ್ರನು ಯಾವ ನಕ್ಷತ್ರದಲ್ಲಿರುತ್ತಾನೋ ಅದು ಆ ತಿಂಗಳ ಹೆಸರು. ಎರಡು ಪಕ್ಷಗಳು ಸೇರಿ (ಒಂದು ಶುಕ್ಲ ಪಕ್ಷ + ಒಂದು ಕೃಷ್ಣ ಪಕ್ಷ) ಒಂದು ತಿಂಗಳಾಗುತ್ತದೆ. ಒಟ್ಟು 12 ತಿಂಗಳುಗಳು – (ಚಿತ್ರಾ ನಕ್ಷತ್ರದಲ್ಲಿ ಚಂದ್ರನಿದ್ದಾಗ) ಚೈತ್ರ, (ವಿಶಾಖಾ ನಕ್ಷತ್ರ) ವೈಶಾಖ, (ಜ್ಯೇಷ್ಠ ನಕ್ಷತ್ರ) ಜ್ಯೇಷ್ಠ, (ಪೂರ್ವಾಷಾಢ/ಉತ್ತರಾಷಾಢ ನಕ್ಷತ್ರ) ಆಷಾಢ, (ಶ್ರವಣ ನಕ್ಷತ್ರ) ಶ್ರಾವಣ, (ಪೂರ್ವಾಭಾದ್ರ/ಉತ್ತರಾಭಾದ್ರ ನಕ್ಷತ್ರ) ಭಾದ್ರಪದ, (ಅಶ್ವಿನೀ ನಕ್ಷತ್ರ) ಆಶ್ವಯುಜ, (ಕೃತ್ತಿಕಾ ನಕ್ಷತ್ರ) ಕಾರ್ತಿಕ, (ಮೃಗಶಿರ ನಕ್ಷತ್ರ) ಮಾರ್ಗಶಿರ, (ಪುಷ್ಯ ನಕ್ಷತ್ರ) ಪುಷ್ಯ, (ಮಘಾ ನಕ್ಷತ್ರ) ಮಾಘ, (ಪೂರ್ವ /ಉತ್ತರ ಫಲ್ಗುಣೀ ನಕ್ಷತ್ರ) ಫಾಲ್ಗುಣ ಮಾಸಗಳು ಎಂದು.

ಎರಡು ತಿಂಗಳಿಗೆ ಒಂದು ಋತುವಿನಂತೆ ಆರು ಋತುಗಳು. ಋತುಗಳು ವಾತಾವರಣದಲ್ಲಿ ಆಗುವ ಬದಲಾವಣೆಗಳಿಗನುಸಾರವಾಗಿ ಹೆಸರಿಸಲ್ಪಟ್ಟಿವೆ. ಆದ್ದರಿಂದ ಆಯುರ್ವೇದದಲ್ಲಿ ಋತುಭುಕ್ ಎಂದು ಹೇಳಿದ್ದಾರೆ. ಚೈತ್ರ–ವೈಶಾಖಗಳು ಸೇರಿ ವಸಂತ ಋತು, ಜ್ಯೇಷ್ಠ–ಆಷಾಢಗಳು ಸೇರಿ ಗ್ರೀಷ್ಮ ಋತು, ಶ್ರಾವಣ–ಭಾದ್ರಪದಗಳು ಸೇರಿ ವರ್ಷ ಋತು, ಆಶ್ವಯುಜ–ಕಾರ್ತಿಕ ಮಾಸಗಳು ಸೇರಿ ಶರದ್ ಋತು, ಮಾರ್ಗಶಿರ–ಪುಷ್ಯಗಳು ಸೇರಿ ಹೇಮಂತ(ಹಿಮವಂತ) ಋತು ಮತ್ತು ಮಾಘ–ಫಾಲ್ಗುಣಗಳು ಸೇರಿ ಶಿಶಿರ ಋತುವಾಗುತ್ತದೆ.

### ಸಂಕ್ರಮಣ ಹೇಗಾಗುತ್ತದೆ?

ಮೊದಲೇ ಹೇಳಿದಂತೆ ಒಟ್ಟು 108 ನಕ್ಷತ್ರಪಾದಗಳು. ಇದರಲ್ಲಿ 9 ಪಾದಗಳು ಸೇರಿ ಒಂದು ರಾಶಿಯಾಗುತ್ತದೆ. ಸೂರ್ಯನ ಚಲನೆಯನ್ನು ರಾಶಿ ವಿಧಾನದಲ್ಲಿ ಗಣಿಸಲಾಗುತ್ತದೆ. ಅಂದರೆ ಅಲ್ಲಿಯೂ ಕೂಡ 12 ತಿಂಗಳೇ ಆಗುತ್ತವೆ. ಒಂದು ತಿಂಗಳಿಗೆ ಸೂರ್ಯನ ಚಲನೆ ಭೂಮಿಯ ದೃಷ್ಟಿಯಿಂದ 30 ಡಿಗ್ರಿಯಷ್ಟು ಇರುತ್ತದೆ. ಆ ನಕ್ಷತ್ರಗಳು ತೋರುವ ರೂಪದ ಮೇಲೆ ರಾಶಿಗಳನ್ನು ಹೆಸರಿಸಲಾಗಿದೆ. ಆ 12 ರಾಶಿಗಳೆಂದರೆ ಮೇಷ, ವೃಷಭ, ಮಿಥುನ, ಕಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಂಭ ಮತ್ತು ಮೀನ ಎಂದು. ತಿಂಗಳ 14–15ನೇ ದಿನಾಂಕಗಳಂದು ಸೂರ್ಯನು ಹೊಸ ರಾಶಿಯನ್ನು ಪ್ರವೇಶಿಸುತ್ತಾನೆ. ಅದನ್ನು ಸಂಕ್ರಮಣ ಎಂದು ಕರೆಯಲಾಗುತ್ತದೆ. ಪ್ರತಿ ತಿಂಗಳೂ ಒಂದು ಸಂಕ್ರಮಣವಾಗುತ್ತದೆ ಎಂದು ಇದರಿಂದ ತಿಳಿಯುತ್ತದೆ.

ಅಂತೆಯೇ ಭೂಮಿಯ ಮೇಲೆ ಸೂರ್ಯನ ಕಿರಣಗಳ ಪ್ರಖರತೆಯ ಮೇಲೆ ಎರಡು 'ಅಯನ' (ಚಲನೆ)ಗಳನ್ನು ಗುರುತಿಸಲಾಗಿದೆ. ಮಕರ ಸಂಕ್ರಮಣದಿಂದ ಕಟಕ ಸಂಕ್ರಮಣದವರೆಗೆ ಉತ್ತರಾಯಣ ಎಂದು ಕರೆದರೆ, ಕಟಕದಿಂದ ಮಕರ ಸಂಕ್ರಮಣದವರೆಗಿನ ಕಾಲವನ್ನು ದಕ್ಷಿಣಾಯನ ಎಂದು ಕರೆಯುತ್ತೇವೆ.

ಹೀಗೆ ಚಂದ್ರನ ಮತ್ತು ಸೂರ್ಯನ ಸುತ್ತ ಭೂಮಿಯ ಪರಿಭ್ರಮಣದ ಪ್ರಮಾಣವು ಎರಡು ಅಯನಗಳು ಸೇರಿ 360–365 ದಿನಗಳಾಗುತ್ತವೆ. ಇದನ್ನು ನಾವು ವರ್ಷ/ಸಂವತ್ಸರ ಎಂದು ಕರೆಯುತ್ತೇವೆ. ಪ್ರತಿ ವರ್ಷಕ್ಕೂ ನಮ್ಮಲ್ಲಿ ಒಂದೊಂದು ಹೆಸರನ್ನು ನೀಡಲಾಗಿದೆ. ಈಗಿನ ಸಂವತ್ಸರದ ಹೆಸರು ಪ್ಲವ ಎಂದು. ಮುಂದಿನ ಸಂವತ್ಸರದ ಹೆಸರು ಶುಭಕೃತ್ ಎಂದು.


ಹೀಗೆ ಕಾಲಗಣನೆಗೆ ಅನುಸಾರವಾಗಿ ನಾವು ಸಂವತ್ಸರ, ಅಯನ, ಋತು, ಮಾಸ, ಪಕ್ಷ, ತಿಥಿ, ನಕ್ಷತ್ರ ಮತ್ತು ವಾರಗಳನ್ನು ಪ್ರತಿನಿತ್ಯ ಬಳಸುವುದರ ಜೊತೆಗೆ ಅದರ ಹಿಂದೆ ಇರುವ ವಿಜ್ಞಾನ ಗಣಿತಗಳ ಲೆಕ್ಕಾಚಾರ ಇರುವುದನ್ನೂ ತಿಳಿದುಕೊಂಡರೆ ನಮ್ಮ ಪೂರ್ವಜರು ಮಾಡಿಟ್ಟ ಕಾಲಗಣನೆ ಪದ್ಧತಿಯ ಬಗ್ಗೆ ಹೆಮ್ಮೆ ಮೂಡುತ್ತದೆ.

(ಲೇಖಕರು: ಮಾ. ಚಂ. ನಾಗರಾಜ, ಬೆಂಗಳೂರು)

## ಸಂಸ್ಮರಣೆ — ಜಮ್ನಾಲಾಲ್ ಬಜಾಜ್ (4 ನವೆಂಬರ್ 1889–11 ಫೆಬ್ರವರಿ 1942)

ಬಜಾಜ್ ಸಂಸ್ಥೆಯ ಹೆಸರನ್ನು ಕೇಳರಿಯದವರು ಭಾರತದಲ್ಲಿ ಇಲ್ಲ. ಹಲವು ದಶಕಗಳಿಂದ ಬಜಾಜ್ ಸಂಸ್ಥೆ ಭಾರತದ ಜನಮನದಲ್ಲಿ ಚಿರಪರಿಚಿತ. ಒಂದು ವ್ಯಾಪಾರೀ ಸಂಸ್ಥೆ ತನ್ನ ಉತ್ಪನ್ನಗಳಿಂದ ತನ್ನ ಲಾಭ ಗಳಿಕೆಯಿಂದ ಹೆಸರುವಾಸಿಯಾಗುವುದು ಸಹಜವೇ. ಆದರೆ ಈ ಸಂಸ್ಥೆಗೆ ಅಡಿಪಾಯ ಹಾಕಿದ ವ್ಯಕ್ತಿ ಒಬ್ಬ ಮಹಾನ್ ತ್ಯಾಗಿ ಮತ್ತು ಅಪ್ರತಿಮ ರಾಷ್ಟ್ರಭಕ್ತನಾಗಿ ತನ್ನೆಲ್ಲವನ್ನೂ ರಾಷ್ಟ್ರಸೇವೆಗೆ ಎರೆದು ಸಂತನಾಗಿ ಜೀವನ ನಡೆಸಿದವ ಎಂಬುದು ಭಾರತೀಯ ಚರಿತ್ರೆಯ ಪುಟಗಳಲ್ಲಿ ಮಹತ್ವಪೂರ್ಣವೆನಿಸುವಂತೆ ದಾಖಲಾಗಿದೆ. ಇವರೇ ಜಮ್ನಾಲಾಲ್ ಬಜಾಜ್.

ಜಮ್ನಾಲಾಲ್ ಬಜಾಜ್ 1889ರ ನವೆಂಬರ್ 4ರಂದು ಜನಿಸಿದರು. ಅವರ ಊರು ರಾಜಾಸ್ಥಾನದ ಸಿಕಾರ ಜಿಲ್ಲೆಯ ಜಯಪುರ. ತಂದೆ ಕನೀರಾಮ್ ಮತ್ತು ತಾಯಿ ಬಿರ್ದೀಬಾಯಿ. ಈ ಹೃದಯಸಂಪನ್ನ ದಂಪತಿಗಳು, ಮಕ್ಕಳಿಲ್ಲದೆ ಕೊರಗುತ್ತಿದ್ದ ವಾರ್ಧಾದ ವಾಪಾರಿಯಾದ ಸೇಠ್ ಬಚ್ಛಾರಾಜ್ ಮತ್ತು ಸಿದೀಬಾಯಿ ದಂಪತಿಗಳು ದತ್ತು ಕೊಡಿ ಎಂದು ಗೋಗರೆದಾಗ ಇಲ್ಲವೆನ್ನಲಾಗದೆ ಒಪ್ಪಿಕೊಂಡರು. ಅದಕ್ಕೆ ಅವರು ಹಣ ನೀಡಲು ಮುಂದೆ ಬಂದರೆ ಒಪ್ಪಿಕೊಳ್ಳದ ಅವರು, ಹೆಚ್ಚು ಒತ್ತಾಯಪಡಿಸಿದಾಗ "ಹಾಗೆ ಕೊಡಲೇಬೇಕೆಂಬುದು ನಿಮ್ಮ ಹಠವಾದರೆ ಬಾವಿ ತೋಡಿಸಿ. ಈ ಹಳ್ಳಿಯ ನೀರಿನ ತೀವ್ರ ಅಭಾವ ಸ್ವಲ್ಪ ಮಟ್ಟಿಗಾದರೂ ನೀಗಲಿ' ಎಂದರು.



ಆರು ವರ್ಷ ವಯಸ್ಸಿನ ಜಮ್ನಾಲಾಲ್ ವಾರ್ಧಾದ ಮರಾಠಿ ಶಾಲೆಗೆ ಸೇರಿದ. ನಾಲ್ಕು ವರ್ಷ ಆಗುವಷ್ಟರಲ್ಲಿ 'ಓದು ಸಾಕು. ವ್ಯಾಪಾರ ಕಲಿಯಲಿ' ಎಂದು ಯೋಚಿಸಿದರು ಬಚ್ಚರಾಜರು. ಅಲ್ಲಿಗೆ ಹುಡುಗನ ಓದು ಮುಗಿಯಿತು, ವ್ಯಾಪಾರದ ಅನುಭವ ಪ್ರಾರಂಭ ವಾಯಿತು. ನಿಜವಾಗಿ ಜಮ್ನಾಲಾಲರನ್ನು ಸುಸಂಸ್ಕೃತರ ನ್ನಾಗಿ ಮಾಡಿದ್ದು ಪುಸ್ತಕದ ಓದಲ್ಲ, ಸಾಧನೆ, ಲೋಕಾನುಭವ ಮತ್ತು ತೀವ್ರ ಬುದ್ಧಿಶಕ್ತಿ.

ವ್ಯಾಪಾರವನ್ನು ಹುಡುಗ ಆಸಕ್ತಿಯಿಂದ ಕಲಿಯಲು ಉತ್ತೇಜನ ಕೊಡಬೇಕು ಎಂದು ಬಚ್ಛಾರಾಜರಿಗೆ ಅನ್ನಿಸಿತು. ಅದಕ್ಕಾಗಿ ಹುಡುಗನಿಗೆ ಪ್ರತಿದಿನ ಒಂದು ರೂಪಾಯಿ ಕೊಡುವ ಏರ್ಪಾಟು ಮಾಡಿದರು. ಹುಡುಗ ಹಣವನ್ನು ಹಾಳುಮಾಡದೆ ಜೋಪಾನವಾಗಿ ಕೂಡಿಡುತ್ತಿದ್ದ. ಅದನ್ನು ಯಾವುದಾದರೂ ಒಳ್ಳೆಯ ಕೆಲಸಕ್ಕೆ ಉಪಯೋಗಿಸಬೇಕೆಂದು ನಿರ್ಧರಿಸಿದ. ಈ ಕಾಲದಲ್ಲಿ (1906) ನಾಗಪುರದಿಂದ ಮರಾಠಿ ಪತ್ರಿಕೆ 'ಕೇಸರಿ' ಯ ಹಿಂದಿ ಅವತರಣಿಕೆ ಪ್ರಕಟವಾಗಲು ಪ್ರಾರಂಭವಾಯಿತು. ಇದರ ಸಂಪಾದಕರು ಲೋಕಮಾನ್ಯ ಬಾಲಗಂಗಾಧರ ತಿಲಕರು. ಜಮ್ನಾಲಾಲನಿಗೆ ತಿಲಕರ ಈ ಪ್ರಯತ್ನ ಹಿಡಿಸಿತು. ಕೂಡಿಹಾಕಿದ್ದ ಹಣದಿಂದ ನೂರು ರೂಪಾಯಿ ಸಹಾಯ ಧನವನ್ನು ತಿಲಕರ ಯೋಜನೆಗೆ ಕಳುಹಿಸಿದ.

ಜಮ್ನಾಲಾಲರು ತಮ್ಮ ಕುಟುಂಬದಲ್ಲಿ ಕಂಡ ಹಲವಾರು ಸಾವುಗಳಿಂದ ಆದ ಅರಿವಿನಿಂದ 'ಸಾವು ನಿಶ್ಚಿತ. ಅನ್ಯಾಯದಿಂದ ದೂರವಿರು' ಎಂದು ಬರೆದು ಗೋಡೆಯ ಮೇಲೆ ತೂಗು ಹಾಕಿ ಅದರಂತೆ ಬಾಳಿದರು. ವಂಶಪಾರಂಪರ್ಯದಿಂದ ಬಂದ ಸಂಪತ್ತು ತಮ್ಮದಲ್ಲ, ಪರೋಪಕಾರಕ್ಕಾಗಿರುವ ಹಣ ಎಂದು ಭಾವಿಸಿದ ಅವರು ಬಚ್ಚರಾಜರಿಂದ ಮೂಲತಃ ಎಷ್ಟು ಪಡೆದರೋ ಅದರ ಐದರಷ್ಟು ಹಣವನ್ನು ಧರ್ಮ ಕಾರ್ಯಗಳಿಗೆ ಉಪಯೋಗಿಸಿದರು. ನ್ಯಾಯವಾಗಿ ವ್ಯಾಪಾರ ಮಾಡಿ ವ್ಯಾಪಾರದಲ್ಲಿ ಒಳ್ಳೆಯ ಹೆಸರು ಸಂಪತ್ತು ಎರಡನ್ನೂ ಸಂಪಾದಿಸಿದರು.

1908ರಲ್ಲಿ ಇನ್ನೂ ಹದಿನೆಂಟು ವಯಸ್ಸಿನ ಜಮ್ನಾಲಾಲರನ್ನು ಗೌರವ ಮ್ಯಾಜಿಸ್ಟ್ರೇಟರನ್ನಾಗಿ ಮಾಡಲಾಯಿತು. 1918 ರಲ್ಲಿ ಬ್ರಿಟಿಷ್ ಸರ್ಕಾರ ಜಮ್ನಾಲಾಲರಿಗೆ 'ರಾವ್ ಬಹದ್ದೂರ್' ಎಂಬ ಬಿರುದನ್ನು ನೀಡಿ ಗೌರವಿಸಿತು. ಸರಕಾರ ಕೊಟ್ಟ ಬಿರುದು ಜಮ್ನಾಲಾಲ್ ಬಜಾಜರ ಗಾಂಧೀಜಿ ಮತ್ತು ಇತರ ನಾಯಕರೊಡನೆ ಇದ್ದ ವ್ಯವಹಾರಗಳಿಗೆ ಅಡ್ಡಬರಲಿಲ್ಲ. ಬಹಿರಂಗವಾಗಿಯೇ 'ಹೋಂರೂಲ್' ಚಳುವಳಿಯಲ್ಲಿ ಧುಮುಕಿದರು.

1920ರಲ್ಲಿ ಅಸಹಕಾರ ಚಳುವಳಿಯಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಜಮ್ನಾಲಾಲರು ಬಿರುದನ್ನು ಹಿಂದಿರುಗಿಸಿ ಪೂರ್ತಿಯಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪದಾರ್ಪಣ ಮಾಡಿದರು. ವಿದೇಶಿ ವಸ್ತ್ರಗಳನ್ನು ತೊಡಬಾರದು ಎಂದು ನಿರ್ಧರಿಸಿದಾಗ ತಮ್ಮ ಮನೆಯಲ್ಲಿದ್ದ ಸಾವಿರಾರು ರೂಪಾಯಿ ಬೆಲೆ ಬಾಳುವ ವಿದೇಶಿ ಬಟ್ಟೆಗಳನ್ನು ನಿರ್ವಿಕಾರವಾಗಿ ಬೆಂಕಿಗೆ ಆಹುತಿಯಿತ್ತು ಖಾದಿ ತೊಡಲು ಪ್ರಾರಂಭಿಸಿದರು. ಶ್ರೀಮಂತರಾಗಿದ್ದರೂ ತಮ್ಮ ಮಗಳ ಮದುವೆಯನ್ನು ಸರಳವಾಗಿ ಆಶ್ರಮದಲ್ಲಿ ಒಂದೇ ಗಂಟೆಯಲ್ಲಿ ಮುಗಿಸಿದರು. ಗಾಂಧೀಜಿ ಅಸ್ಪೃಶ್ಯರ ಉದ್ಧಾರಕ್ಕೆ ಕರೆಕೊಟ್ಟಾಗ ತಕ್ಷಣ ಜಮ್ನಾಲಾಲ್ ಓಗೊಟ್ಟರು. ಆರೋಗ್ಯವನ್ನೂ ಲೆಕ್ಕಿಸದೆ ಹಲವಾರು ಬಾರಿ ಬಂಧನಕ್ಕೊಳಗಾಗಿ ಕಷ್ಟಗಳನ್ನು ಎದುರು ಹಾಕಿಕೊಂಡರು.

ಹಾಗೆಂದು ಗಾಂಧೀಜಿಯವರ ಎಲ್ಲ ವಿಚಾರಗಳನ್ನೂ ಅವರು ಕಣ್ಮುಚ್ಚಿ ಒಪ್ಪಿಕೊಳ್ಳುತ್ತಿರಲೂ ಇಲ್ಲ. 1938ರಲ್ಲಿ ಹರಿಪುರದಲ್ಲಿ ನಡೆಯಬೇಕಿದ್ದ ಕಾಂಗ್ರೆಸ್ಸಿನ ಸತ್ರದ ಅಧ್ಯಕ್ಷತೆಗೆ ಜಮ್ನಾಲಾಲ್ ರನ್ನೇ ಆರಿಸುವಂತೆ ಗಾಂಧೀಜಿಯವರ ಒತ್ತಾಸೆಯಿತ್ತು. ಅದಕ್ಕೆ ಕಟ್ಟುಬಿದ್ದು ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಅವರನ್ನು ಆರಿಸಿತು ಕೂಡ. ಆದರೆ, ಬಜಾಜರಿಗೆ ದೇಶದ ಯುವಕರ ನಾಡಿಮಿಡಿತ ಅರ್ಥವಾಗಿತ್ತು. ಅದಕ್ಕೆಂದೇ ಅವರು ಸತ್ರದ ಅಧ್ಯಕ್ಷತೆಯನ್ನು ಸುಭಾಷ್ಚಂದ್ರ ಬೋಸರಿಗೆ ವಹಿಸಿಕೊಟ್ಟರು.

ಮುಂದೆ ಜಮ್ನಾಲಾಲ್ ಕಡಿಮೆ ಖರ್ಚಿನಲ್ಲಿ ಒಂದು ಗುಡಿಸಲು ಕಟ್ಟಿಕೊಂಡು ಯಾವಾಗಲೂ ಗೋವುಗಳನ್ನು ನೋಡಿಕೊಂಡು ಗೋಶಾಲೆಯಲ್ಲೇ ಇರುತ್ತಿದ್ದರು. ಗೋಸೇವೆಯೇ ಜಮ್ನಾಲಾಲರ ಜೀವನದ ಅಂತಿಮ ಚಟುವಟಿಕೆಯಾಗಿತ್ತು. ಅವರು 1942ರ ಫೆಬ್ರವರಿ 11ರಂದು ಈ ಲೋಕವನ್ನಗಲಿದರು. ಇಂದು ಬಜಾಜ್ ಸಂಸ್ಥೆ ಭಾರತದ ಪ್ರಸಿದ್ಧ ಸಂಸ್ಥೆಗಳಲ್ಲಿ ಒಂದು. ಆ ಪ್ರಸಿದ್ಧಿಗೆ ಮೀರಿದ್ದು, ದೇಶಕ್ಕಾಗಿ ಮಿಡಿದ ಜಮ್ನಾಲಾಲರ ಹೃದಯ.

## ಎಲ್ಲೋ ಕೇಳಿದ ಕಥೆ

ರಷ್ಯಾ ಮತ್ತು ಜಪಾನಿನ ನಡುವೆ ಯುದ್ಧ ನಡೆಯುತ್ತಿದ್ದ ದಿನಗಳು ಅವು. ರಷ್ಯಾಗೆ ಹೋಲಿಸಿದಲ್ಲಿ ಜಪಾನ್ ಬಹಳ ಸಣ್ಣ ದೇಶವಾಗಿತ್ತು. ರಷ್ಯಾದಲ್ಲಿ ಇನ್ನೂ ಕಮ್ಯುನಿಸ್ಟರು ಅಧಿಕಾರಕ್ಕೆ ಬಂದಿರಲಿಲ್ಲ. ಎರಡು ದೇಶಗಳಲ್ಲೂ ಅರಸೊತ್ತಿಗೆ ಇತ್ತು.

ಜಪಾನಿನ ರಾಜ ಮಿಕಾಡೋ ರಷ್ಯಾದ ಆಕ್ರಮಣದ ಬಗ್ಗೆ ಯೋಚಿಸತೊಡಗಿದ. ಕೊನೆಗೆ 'ರಷ್ಯಾದ ಹಡಗುಗಳು ನಮ್ಮ ಮೇಲೆ ಆಕ್ರಮಣ ಮಾಡುತ್ತವೆ. ಅವುಗಳಲ್ಲಿ ಕೆಲವನ್ನಾದರೂ ನಾವು ಮುಳುಗಿಸಿ ನಾಶಮಾಡಿದಲ್ಲಿ ರಷ್ಯಾದ ಶಕ್ತಿಯು ಕ್ಷೀಣಗೊಳ್ಳುವುದು' ಎಂದು ಆತ ಯೋಚಿಸಿ


ಅದರಂತೆ ಜಪಾನೀ ಜನತೆಗೆ ಈ ರೀತಿ ಕರೆ ನೀಡಿದ : "ರಷ್ಯಾದ ಹಡಗುಗಳನ್ನು ಸಮುದ್ರದಲ್ಲಿ ಮುಳುಗಿಸಿ ನಾಶ ಮಾಡಬಲ್ಲಂತಹ ದೇಶಭಕ್ತರು ಇಂದು ಜಪಾನೀ ಸೇನೆಗೆ ಅತ್ಯವಶ್ಯವಾಗಿ ಬೇಕಾಗಿದ್ದಾರೆ. ಆದರೆ ಈ ಕಾರ್ಯ ಮಾಡುವವರು ಹಡಗುಗಳೊಂದಿಗೆ ನಾಶಗೊಳ್ಳುವರು. ಬದುಕಿ ಉಳಿಯುವುದು ಪ್ರಾಯಶಃ ಅಸಂಭವ. ಈ ಕಾರ್ಯ ಮಾಡಬಲ್ಲಂಥವರು ಮುಂದೆ ಬನ್ನಿ."

ರಾಜನ ಆಶ್ಚರ್ಯಕ್ಕೆ ಅರ್ಜಿಗಳು ರಾಶಿರಾಶಿಯಾಗಿ ಬಂದು ಬೀಳತೊಡಗಿದವು. ಆ ಅರ್ಜಿಗಳಲ್ಲಿ ಕೆಲವು ರಕ್ತದಿಂದಲೇ ಬರೆದವುಗಳಿದ್ದವು. ಮಿಕಾಡೋ ಅಂಥವರನ್ನೇ ತನ್ನ ಯೋಜನೆಗೆ ಆಯ್ಕೆ ಮಾಡಿದ.

ಆ ವೀರ ಹಾಗೂ ದೇಶಭಕ್ತ ಜಪಾನೀಯರು ತಮ್ಮ ಬೆನ್ನಿಗೆ ಬಾಂಬುಗಳನ್ನು ಕಟ್ಟಿಕೊಂಡು ರಷ್ಯಾದ ಹಡಗುಗಳ ದೊಡ್ಡ ಹೊಗೆನಳ್ಳಿಗಳ ಒಳಗೆ ಧುಮುಕತೊಡಗಿದರು. ಕೆಲವೇ ಕ್ಷಣಗಳಲ್ಲಿ ಬಾಂಬುಗಳು ಸಿಡಿದು ಅವರು ತುಂಡು ತುಂಡು ಆಗುವುದರೊಂದಿಗೆ ರಷ್ಯಾದ ಹಡಗುಗಳು ಸಮುದ್ರದಲ್ಲಿ ಮುಳುಗಿಹೋದವು.

ಯುದ್ಧ ಜೀವನದಲ್ಲೇ ನಡೆಯಲಿ, ರಣಭೂಮಿಯಲ್ಲೇ ನಡೆಯಲಿ. ಅದು ಮೊದಲು ತೊಡಗುವುದು ಎದೆಗಳಲ್ಲೆ. ಗಟ್ಟಿತನದಿಂದ ಎದುರಿಸಿದವನಿಗೇ ಜಯ ನಿಶ್ಚಿತ.

## ಪುಸ್ತಕ ಪರಿಚಯ




ಪುಸ್ತಕದ ಹೆಸರು : ಅವಿತಿಟ್ಟ ಅಂಬೇಡ್ಕರ್
ಲೇಖಕರು : ಡಾ. ಸುಧಾಕರ ಹೊಸಳ್ಳಿ ಹಾಗೂ ಪ್ರವೀಣಕುಮಾರ್ ಮಾವಿನಕಾಡು
ಪ್ರಕಾಶಕರು : ಜ್ಞಾನಾಕ್ಷಿ ಪ್ರಕಾಶನ
ಬೆಲೆ : ರೂ. 120
ಪುಟಗಳು : 104

ಡಾ. ಅಂಬೇಡ್ಕರ್ ಅವರು ಬಾಲ್ಯ ಜೀವನದಲ್ಲಿ ಅನುಭವಿಸಿದ ಅಪಮಾನಗಳ ಬಗ್ಗೆ ಪ್ರತಿಯೊಬ್ಬರಿಗೂ ತಿಳಿದಿದೆ. ಆದರೆ ಸಂವಿಧಾನ ರಚನೆಯ ಸಂದರ್ಭದಲ್ಲಿ, ಸಂವಿಧಾನ ರಚನಾಕಾರ್ಯವನ್ನು ಯಶಸ್ವಿಯಾಗಿ ಮುಗಿಸಿ ಮಹಾನಾಯಕ ಎನಿಸಿಕೊಂಡ ನಂತರವೂ ಅವರಿಗಾದ ಅಪಾರ ಅವಮಾನಗಳ ಬಗ್ಗೆ ಹೆಚ್ಚಿನ ಮಾಹಿತಿ ಎಲ್ಲಿಯೂ ಲಭ್ಯವಿಲ್ಲ.

ಹಾಗಾದರೆ ಮಹಾ ನಾಯಕ ಬಾಬಾ ಸಾಹೇಬರನ್ನು ಜನಪ್ರಿಯರಾಗದಂತೆ ತಡೆಯಲು ಪ್ರಯತ್ನಿಸಿದವರು ಯಾರು? ಹೆಜ್ಜೆ ಹೆಜ್ಜೆಗೂ ಅವರನ್ನು ಅಪಮಾನಿಸಿದವರು ಯಾರು? ಕೊನೆಯ ದಿನಗಳಲ್ಲಿ ಅವರ ನಿಕಟವರ್ತಿಗಳಾಗಿ ಉಳಿದವರು ಯಾರು? ಎನ್ನುವ ಹಲವು ವಿಷಯಗಳ ಬಗ್ಗೆ ಬೆಳಕು ಚೆಲ್ಲುವ ಸಂಶೋಧಿತ ನಾಟಕ 'ಅವಿತಿಟ್ಟ ಅಂಬೇಡ್ಕರ್'.

ಸಂಪರ್ಕಕ್ಕಾಗಿ: 9008540090, 9343588544
ಖರೀದಿಗಾಗಿ: ayodhyabooks.com



ನೌಕಾಪಡೆಯ ಹಡಗುಗಳಿಗಾಗಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ವಿನ್ಯಾಸಗೊಳಿಸಿದ ಮತ್ತು ಅಭಿವೃದ್ಧಿಪಡಿಸಿದ ಸುಧಾರಿತ ಎಲೆಕ್ಟ್ರಾನಿಕ್ ವಾರ್‌ಫೇರ್ ಸೂಟ್ 'ಶಕ್ತಿ' ಅನ್ನು ಶುಕ್ರವಾರ, ನವೆಂಬರ್ 19 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತೀಯ ನೌಕಾಪಡೆಗೆ ಔಪಚಾರಿಕವಾಗಿ ಹಸ್ತಾಂತರಿಸಿದರು. ಝಾನ್ಸಿಯಲ್ಲಿ ರಾಷ್ಟ್ರ ರಕ್ಷಾ ಸಮರ್ಪಣ ಪರ್ವ ಅಂಗವಾಗಿ 'ಶಕ್ತಿ'ಯ ಹಸ್ತಾಂತರ ಸಮಾರಂಭ ನಡೆಯಿತು. ಭಾರತೀಯ ನೌಕಾಪಡೆಯ ಯುದ್ಧನೌಕೆಗಳಿಗಾಗಿ ಸಾಂಪ್ರದಾಯಿಕವಾದ ಪ್ರತಿಬಂಧಕ, ಪತ್ತೆ, ವರ್ಗೀಕರಣ, ಗುರುತಿಸುವಿಕೆ ಮತ್ತು ಜ್ಯಾಮಿಂಗ್‌ಗಾಗಿ ಮತ್ತು ಆಧುನಿಕ ರಾಡಾರ್‌ಗಳನ್ನು ಇದು ಒದಗಿಸುತ್ತದೆ ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆಯು ಗುರುವಾರ ಹೇಳಿದೆ. ಕ್ಷಿಪಣಿ ದಾಳಿಯ ವಿರುದ್ಧ ಭಾರತೀಯ ನೌಕಾಪಡೆಯ ಹಡಗುಗಳ ರಕ್ಷಣೆಗಾಗಿ ವೈಡ್‌ಬ್ಯಾಂಡ್ ಎಲೆಕ್ಟ್ರಾನಿಕ್ ಸಪೋರ್ಟ್ ಸಿಸ್ಟಮ್ ಮತ್ತು ಎಲೆಕ್ಟ್ರಾನಿಕ್ ಕೌಂಟರ್ ಮೆಷರ್ ವ್ಯವಸ್ಥೆ ಇದರಲ್ಲಿರಲಿದೆ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ




ಭಾರತದ ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ತಯಾರಿಸಿದ 2 ಕೋಟಿ ಡೋಸ್ ನೊವಾವ್ಯಾಕ್ಸ್ ಕೋವಿಡ್–19 ಲಸಿಕೆಯನ್ನು ಇಂಡೋನೇಷ್ಯಾಕ್ಕೆ ರಫ್ತು ಮಾಡಲು ಭಾರತ ಅನುಮೋದಿಸಿದೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ. ಇಂಡೋನೇಷ್ಯಾದಲ್ಲಿ ತುರ್ತು ಬಳಕೆಗೆ ಅನುಮತಿ ಹೊಂದಿದೆ ಈ ಲಸಿಕೆ. ಅಲ್ಲದೇ, ಭಾರತದಲ್ಲಿ ಬಳಕೆಯಲ್ಲಿರುವ ಕೋವಿಶೀಲ್ಡ್ ನ 2–3 ಕೋಟಿ ಡೋಸ್‌ಗಳನ್ನು, ಡಿಸೆಂಬರ್ ನಲ್ಲಿ ಹಾಗೂ ಭಾರತದ ಸ್ವಂತ ಅಗತ್ಯ ಪೂರೈಸಿದ ನಂತರ ಜನವರಿಯಿಂದ ಹೆಚ್ಚು ಡೋಸ್‌ಗಳನ್ನು ರಫ್ತು ಮಾಡುವ ಯೋಜನೆಯನ್ನು ಕಂಪೆನಿ ಹೊಂದಿದೆ.

ಕರ್ನಾಟಕವು 18,000 ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಗೆ ಘನತ್ಯಾಜ್ಯ ನಿರ್ವಹಣೆ, ಗ್ರಾಮೀಣ ಪ್ರದೇಶಗಳಲ್ಲಿ ಸೌರಶಕ್ತಿ ಬಳಕೆ ಕುರಿತು ತರಬೇತಿ ನೀಡಲಿದೆ. ಬೆಂಗಳೂರು ಮೂಲದ ಮಹಾತ್ಮ ಗಾಂಧಿ ಗ್ರಾಮೀಣ ಶಕ್ತಿ ಮತ್ತು ಅಭಿವೃದ್ಧಿ ಸಂಸ್ಥೆ (MGIRED)ಯು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (NRLM) ಸಹಯೋಗದೊಂದಿಗೆ ಈ ತರಬೇತಿ ಈ ತರಬೇತಿ ನೀಡಲಿದ್ದು, ತರಬೇತಾದ ಮಹಿಳೆಯರು ತಮ್ಮ ಸ್ಥಳೀಯ ಗ್ರಾಮ ಪಂಚಾಯತ್‌ಗಳಲ್ಲಿ ದಿನನಿತ್ಯದ ತ್ಯಾಜ್ಯ ಸಂಗ್ರಹಣೆ, ತ್ಯಾಜ್ಯ ವಿಂಗಡಣೆ, ಸ್ವಚ್ಛವಾಹಿನಿ ಚಾಲನೆ ಮುಂತಾದ ಘನತ್ಯಾಜ್ಯ ನಿರ್ವಹಣಾ ಕರ್ತವ್ಯಗಳನ್ನು ನಿರ್ವಹಿಸಲು ಸ್ವಚ್ಛಕಾರ್ಮಿಕರಾಗಿ ತೊಡಗಿಸಿಕೊಳ್ಳಲಿದ್ದಾರೆ ಎಂದು ಜಲಶಕ್ತಿ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.



ಪ್ರಧಾನಿ ನರೇಂದ್ರ ಮೋದಿ ಅವರು ನವೆಂಬರ್ 16ರಂದು ಉತ್ತರ ಪ್ರದೇಶದ ಸುಲ್ತಾನ್‌ಪುರ ಜಿಲ್ಲೆಯ ಕರ್ವಾಲ್‌ಖೇರಿಯಲ್ಲಿ ಸೇನೆಯ ಸರಕು ವಿಮಾನದಲ್ಲಿ ಬಂದಿಳಿಯುವ ಮೂಲಕ ಪೂರ್ವಾಂಚಲ್ ಎಕ್ಸ್‌ಪ್ರೆಸ್‌ವೇ ಅನ್ನು ಉದ್ಘಾಟಿಸಿದರು. 341–ಕಿಲೋಮೀಟರ್ ಉದ್ದದ ಪೂರ್ವಾಂಚಲ್ ಎಕ್ಸ್‌ಪ್ರೆಸ್‌ವೇ, ಲಕ್ನೋವನ್ನು ಗಾಜಿಪುರದೊಂದಿಗೆ ಸಂಪರ್ಕಿಸುತ್ತದೆ, ಇದು 302–ಕಿಮೀ ಉದ್ದದ ಆಗ್ರಾ–ಲಕ್ನೋ ಎಕ್ಸ್‌ಪ್ರೆಸ್‌ವೇ ಅನ್ನು ಹಿಂದಿಕ್ಕಿ ಭಾರತದ ಅತಿ ಉದ್ದದ ಎಕ್ಸ್‌ಪ್ರೆಸ್‌ವೇ ಆಗಿ ಹೊರಹೊಮ್ಮಿದೆ. ಉದ್ಘಾಟನೆಯ ನಂತರ, ತುರ್ತು ಪರಿಸ್ಥಿತಿಯಲ್ಲಿ ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳನ್ನು ಲ್ಯಾಂಡಿಂಗ್ ಮತ್ತು ಟೇಕ್–ಆಫ್ ಮಾಡಲು ಸುಲ್ತಾನ್‌ಪುರ ಜಿಲ್ಲೆಯ ಎಕ್ಸ್‌ಪ್ರೆಸ್‌ವೇಯಲ್ಲಿ ನಿರ್ಮಿಸಲಾದ 3.2 ಕಿಮೀ ಉದ್ದದ ಏರ್‌ಸ್ಟ್ರಿಪ್‌ನಲ್ಲಿ ಭಾರತೀಯ ವಾಯುಪಡೆಯ ಏರ್‌ಶೋಗೆ ಮೋದಿ ಸಾಕ್ಷಿಯಾದರು. ನಂತರ ಪ್ರಧಾನಿ ಸಾರ್ವಜನಿಕ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು. ಈ ಎಕ್ಸ್‌ಪ್ರೆಸ್‌ವೇ 6–ಲೇನ್ ಅಗಲವಾಗಿದ್ದು, ಭವಿಷ್ಯದಲ್ಲಿ 8–ಲೇನ್‌ಗೆ ವಿಸ್ತರಿಸಬಹುದಾಗಿದೆ. ಉತ್ತರ ಪ್ರದೇಶದ ಪೂರ್ವ ಭಾಗದ ಲಕ್ನೋ, ಬಾರಾಬಂಕಿ, ಅಮೇಥಿ, ಅಯೋಧ್ಯೆ, ಸುಲ್ತಾನ್‌ಪುರ, ಅಂಬೇಡ್ಕರ್ ನಗರ, ಅಜಂಗಢ್ ಜಿಲ್ಲೆಗಳ ಆರ್ಥಿಕ ಅಭಿವೃದ್ಧಿಗೆ ಈ ರಸ್ತೆ ಉತ್ತೇಜನ ನೀಡಲಿದೆ.

ವಿಮಾನ ಪ್ರಯಾಣದ ವೇಳೆ ಏಕಾಏಕಿ ಅಸ್ವಸ್ಥಗೊಂಡ ಪ್ರಯಾಣಿಕರೊಬ್ಬರಿಗೆ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಹಾಗೂ ವೈದ್ಯರೂ ಆಗಿರುವ ಡಾ. ಭಾಗವತ್ ಕೃಷ್ಣರಾವ್ ಕರಾಡ್ ನೆರವಾಗಿದ್ದಾರೆ. ಕೇಂದ್ರ ಸಚಿವರ ಈ ಕಾರ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ವಿಮಾನ

# ಸಾಲುದ್ದದ ಸುದ್ದಿಗಳು

ಪ್ರಯಾಣ ನಡೆಸುತ್ತಿದ್ದ ಪ್ರಯಾಣಿಕರೊಬ್ಬರು ರಕ್ತದೊತ್ತಡದ ಸಮಸ್ಯೆಯಿಂದಾಗಿ ತಲೆಸುತ್ತು ಬಂದು ಬಿದ್ದಿದ್ದಾರೆ. ಈ ಸಂದರ್ಭದಲ್ಲಿ ಅದೇ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಸಚಿವರು ಶೀಘ್ರವೇ ಪ್ರಥಮ ಚಿಕಿತ್ಸೆಯನ್ನು ನೀಡಿ ರೋಗಿಗೆ ನೆರವಾಗಿದ್ದಾರೆ. ಸಚಿವರು ಪ್ರಯಾಣಿಕರಿಗೆ ಪ್ರಥಮ ಚಿಕಿತ್ಸೆ ನೀಡುತ್ತಿರುವ ವಿಡಿಯೋ ಎಲ್ಲಾ ಕಡೆ ವೈರಲ್ ಆಗಿದೆ.



ಎಲ್‌ಎಸಿಯ ಉತ್ತರ ವಲಯದಲ್ಲಿ ಸರಕು ಪೂರೈಕೆಯನ್ನು ಬಲಪಡಿಸಲು ಭಾರತೀಯ ಸೇನೆ ಮತ್ತು ಭಾರತೀಯ ವಾಯುಪಡೆ ಜಂಟಿಯಾಗಿ ಏರ್‌ಲಿಫ್ಟ್ ನಡೆಸಿವೆ. ಇದಕ್ಕೆ ಆಪರೇಷನ್ ಹರ್ಕ್ಯುಲಸ್ ಎಂದು ಹೆಸರಿಸಲಾಗಿದ್ದು, ಚಳಿಗಾಲಕ್ಕಾಗಿ ಸರಕು ಪೂರೈಕೆಗಾಗಿ ಮಿಲಿಟರಿ ವಿಮಾನವನ್ನು ಇಲ್ಲಿಯೇ ನಿಯೋಜನೆಗೊಳಿಸಲಾಗುತ್ತಿದೆ ಎನ್ನಲಾಗಿದೆ. ಚಳಿಗಾಲದ ಅವಧಿಯಲ್ಲಿ ಗಡಿ ಪ್ರದೇಶಗಳಲ್ಲಿ ಸರಕು ಮರುಪೂರಣವನ್ನು ಹೆಚ್ಚಿಸಲು ನವೆಂಬರ್ 15 ರಂದು ಏರ್ ಲಿಫ್ಟ್ ಕೈಗೊಳ್ಳಲಾಯಿತು ಎಂದು ಮೂಲಗಳು ತಿಳಿಸಿವೆ. ಭಾರತ ಮತ್ತು ಚೀನಾದ ನಡುವೆ ಚಳಿಗಾಲದಲ್ಲೂ ಸಂಘರ್ಷಗೂ ಮುಂದುವರೆಯುವ ಹಿನ್ನೆಲೆಯಲ್ಲಿ ಸಾಕಷ್ಟು ಪ್ರಮಾಣದ ಸರಕು ದಾಸ್ತಾನುಗಳನ್ನು ಖಚಿತಪಡಿಸಲು ಆಪರೇಷನ್ ಹರ್ಕ್ಯುಲಸ್ ನಡೆಸಲಾಗುತ್ತಿದೆ. ವಾಯುಸೇನೆಯ ಸಿ–17, ಐಎಲ್–76, ಎಎನ್–32 ಯುದ್ಧ ವಿಮಾನಗಳನ್ನು ಮಂಗಳವಾರ ಕಾರ್ಯಾಚರಣೆಗೆ ಅಣಿಗೊಳಿಸಲಾಗಿದೆ. ಇವುಗಳು ಚಳಿಗಾಲದಲ್ಲಿ ಯೋಧರಿಗೆ ಆಹಾರ, ವಸ್ತ್ರ, ಇಂಧನ ಸೇರಿದಂತೆ ಅಗತ್ಯ ವಸ್ತುಗಳನ್ನು ಪೂರೈಕೆ ಮಾಡಲಿದೆ. ಈಗಾಗಲೇ ಮೊದಲ ವಿಮಾನ ಉತ್ತರ ವಲಯ ಏರ್ ಕಮಾಂಡ್‌ನಿಂದ ಎಲ್‌ಎಸಿಗೆ ಸರಕು ಹೊತ್ತು ಸಾಗಿಸಿದೆ ಎಂದು ತಿಳಿದುಬಂದಿದೆ.

ನಾಗರಿಕ ವಿಮಾನಯಾನ ಆರ್ಥಿಕ ಬೆಳವಣಿಗೆಗೆ ಪೂರಕವಾಗಿರುವ ಪ್ರಮುಖ ಆಧಾರ ಸ್ತಂಭಗಳಲ್ಲಿ ಒಂದಾಗಿ ಹೊರಹೊಮ್ಮುತ್ತಿರುವ ಈ ಸಂದರ್ಭದಲ್ಲಿ ಭಾರತ ವಿಶ್ವದ ಮೂರನೇ ಅತಿದೊಡ್ಡ ದೇಶೀಯ ವಿಮಾನಯಾನ ಮಾರುಕಟ್ಟೆಯಾಗಿದೆ ಎಂದು ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ. ನಾಗರಿಕ ವಿಮಾನಯಾನದ (ವಾಣಿಜ್ಯ, ಸಾಮಾನ್ಯ ಮತ್ತು ವ್ಯಾಪಾರ ವಿಮಾನಯಾನ) ಏಷ್ಯಾದ ಅತಿದೊಡ್ಡ ಕಾರ್ಯಕ್ರಮವಾದ ವಿಂಗ್ಸ್ ಇಂಡಿಯಾ, 2022 ರಲ್ಲಿ ಕರ್ಟನ್ ರೈಸರ್ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಭಾರತೀಯ ನಾಗರಿಕ ವಿಮಾನಯಾನ ಉದ್ಯಮವು ಇತ್ತೀಚಿನ ವರ್ಷಗಳಲ್ಲಿ ದೃಢವಾದ ಬೆಳವಣಿಗೆಯನ್ನು ಕಂಡಿದೆ ಮತ್ತು ದೇಶದ ಆರ್ಥಿಕ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದೆ ಎಂದು ಹೇಳಿದರು.



ಉತ್ತರಪ್ರದೇಶದ ಬರಡಾಗಿರುವ ಬುಂದೇಲ್‌ಖಂಡ್ ಪ್ರದೇಶದ ರೈತರಿಗೆ ನೀರಿನ ಕೊರತೆಯನ್ನು ಕೊನೆಗೊಳಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ನವೆಂಬರ್ 19 ರಂದು ಅನೇಕ ಯೋಜನೆಗಳನ್ನು ಉದ್ಘಾಟಿಸಿದರು. ಪ್ರಧಾನಿ ಅವರು ಸಾರ್ವಜನಿಕರಿಗೆ ಅರ್ಪಣೆ ಮಾಡಿದ ಯೋಜನೆಗಳ ಪೈಕಿ ಅರ್ಜುನ್ ಸಹಾಯಕ್ ಯೋಜನೆ, ರತೌಲಿ ವೀರ್ ಯೋಜನೆ, ಭೋನಿ ಅಣೆಕಟ್ಟು ಯೋಜನೆ ಮತ್ತು ಮಜ್ಗಾಂವ್–ಚಿಲ್ಲಿ ಸ್ಪ್ರಿಂಕ್ಲರ್ ಪ್ರಮುಖವಾದುದು. ಈ ಯೋಜನೆಗಳ ಒಟ್ಟು ವೆಚ್ಚವು ರೂ 3,240 ಕೋಟಿಗಿಂತ ಹೆಚ್ಚು ಎಂದು ಅಂದಾಜಿಸಲಾಗಿದೆ. ಅಲ್ಲದೇ ಇದು ಒಮ್ಮೆ ಸಂಪೂರ್ಣವಾಗಿ ಕಾರ್ಯಗತಗೊಂಡರೆ, ಇವುಗಳು ಮಹೋಬಾ, ಹಮೀರ್‌ಪುರ, ಬಂದಾ ಮತ್ತು ಲಲಿತ್‌ಪುರ ಜಿಲ್ಲೆಗಳಲ್ಲಿ ಸುಮಾರು 65,000 ಹೆಕ್ಟೇರ್ ಭೂಮಿಗೆ ನೀರಾವರಿ ಮಾಡಲು ಸಹಾಯ ಮಾಡುತ್ತದೆ, ಹಲವಾರು ಲಕ್ಷ ರೈತರಿಗೆ ಪ್ರಯೋಜನವನ್ನು ನೀಡುತ್ತದೆ. ಈ ಯೋಜನೆಗಳಿಂದ ಈ ಭಾಗದ ಜನರಿಗೆ ಕುಡಿಯುವ ನೀರು ಕೂಡ ದೊರೆಯಲಿದೆ.



ಪವಿತ್ರ ಗಂಗಾ ನದಿ ಮತ್ತು ವಾರಣಾಸಿಯ ಕಾಶಿ ವಿಶ್ವನಾಥ ದೇವಸ್ಥಾನವನ್ನು ಸಂಪರ್ಕಿಸುವ ಕಾಶಿ ವಿಶ್ವನಾಥ ಕಾರಿಡಾರ್ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಡಿಸೆಂಬರ್ 13 ರಂದು ಉದ್ಘಾಟಿಸಲಿದ್ದಾರೆ ಎಂದು ಮೂಲಗಳು ವರದಿ ಮಾಡಿವೆ. ಈ ಯೋಜನೆಯು ದೇವಸ್ಥಾನವನ್ನು ಗಂಗಾನದಿಯ ಘಾಟ್‌ಗಳೊಂದಿಗೆ ಸಂಪರ್ಕಿಸುತ್ತದೆ. ಸುಮಾರು 320 ಮೀಟರ್ ಉದ್ದ ಮತ್ತು 20 ಮೀಟರ್ ಅಗಲದ ಸುಸಜ್ಜಿತ ಕಾಲುದಾರಿಯನ್ನು ಹೊಂದಿದೆ. ಇದಲ್ಲದೆ, ಕಾರಿಡಾರ್ ಉದ್ದಕ್ಕೂ ಕಟ್ಟಡಗಳ ಗೋಡೆಗಳ ಮೇಲೆ ಶ್ಲೋಕಗಳು ಮತ್ತು ವೇದ ಮಂತ್ರಗಳನ್ನು ಕೆತ್ತಲಾಗಿದೆ. ಕಾಶಿ ವಿಶ್ವನಾಥ್ ಕಾರಿಡಾರ್‌ಗೆ ಮಾರ್ಚ್ 2019 ರಲ್ಲಿ ಪ್ರಧಾನಿ ಮೋದಿಯವರು ಶಂಕುಸ್ಥಾಪನೆ ಮಾಡಿದ್ದರು. 5.5 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಲಾದ ಕಾರಿಡಾರ್, ವಸ್ತುಸಂಗ್ರಹಾಲಯ, ಗ್ರಂಥಾಲಯ, ಯಾತ್ರಾರ್ಥಿಗಳಿಗೆ ವಸತಿ ಕೇಂದ್ರ ಮತ್ತು ಮೋಕ್ಷಗೃಹ ಸೌಲಭ್ಯಗಳನ್ನು ಸಹ ಹೊಂದಿದೆ. ಕಾರಿಡಾರ್ ಉದ್ದಕ್ಕೂ ವಿಶೇಷ ಸ್ಕೈ ಬೀಮ್ ಲೈಟ್ ವ್ಯವಸ್ಥೆಯನ್ನು ಸಹ ಅಳವಡಿಸಲಾಗಿದೆ.




ಕೊರೋನಾಕ್ಕೆ ಉತ್ತಮ ಔಷಧವೆಂದು ಸಾಬೀತಾಗಿದ್ದ ಆಯುಷ್–64 ಔಷಧದ ತಂತ್ರಜ್ಞಾನವನ್ನು ಸೆಂಟ್ರಲ್ ಕೌನ್ಸಿಲ್ ಫಾರ್ ರಿಸರ್ಚ್ ಇನ್ ಆಯುರ್ವೇದಿಕ್ ಸೈನ್ಸಸ್ ಸಂಸ್ಥೆಯು ಔಷಧ ತಯಾರಕ 46 ಕಂಪನಿಗಳಿಗೆ ವರ್ಗಾಯಿಸಿದೆ. ಕೋವಿಡ್–19 ನ ಸೌಮ್ಯ ಮತ್ತು ಲಕ್ಷಣರಹಿತ ಮತ್ತು ಮಧ್ಯಮ ಪ್ರಕರಣಗಳಿಗೆ ಆಯುಷ್–64 ಪರಿಣಾಮಕಾರಿ ಔಷಧವಾಗಿದೆ. ಕೋವಿಡ್‌ನ ಮೊದಲ ಅಲೆಗೂ ಮೊದಲು, ಆಯುಷ್ ಸಚಿವಾಲಯದ ಉತ್ಪಾದನಾ ಘಟಕವಾದ ಐಎಂಪಿಸಿಎಲ್ ಸೇರಿದಂತೆ ಏಳು ಕಂಪನಿಗಳು ಆಯುಷ್–64 ತಯಾರಿಕೆಯ ಜವಾಬ್ದಾರಿಯನ್ನು ಹೊಂದಿದ್ದವು. ಈಗ ತಂತ್ರಜ್ಞಾನವನ್ನು 39 ಕಂಪನಿಗಳಿಗೆ ವರ್ಗಾಯಿಸಲಾಗಿದೆ, ಈ ಮೂಲಕ ತಂತ್ರಜ್ಞಾನ ಪಡೆದ ಒಟ್ಟು ಕಂಪನಿಗಳ ಸಂಖ್ಯೆ 46 ಕ್ಕೆ ತಲುಪಿದೆ. ಈ ಕ್ರಮದಿಂದ ಅದರ ಉತ್ಪಾದನೆ ಹೆಚ್ಚಳವಾಗಲಿದೆ ಮತ್ತು ಅದರ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಸುಲಭವಾಗುತ್ತದೆ. ಇಲ್ಲಿಯವರೆಗೆ, ಈ ಔಷಧಿಯ ಅಡ್ಡಪರಿಣಾಮಗಳ ಬಗ್ಗೆ ಯಾವುದೇ ಪ್ರಕರಣಗಳು ವರದಿಯಾಗಿಲ್ಲ, ಆದರೆ ತಜ್ಞರು ವೈದ್ಯರನ್ನು ಸಂಪರ್ಕಿಸಿದ ನಂತರವೇ ಅದನ್ನು ತೆಗೆದುಕೊಳ್ಳುವಂತೆ ಸೂಚಿಸಲಾಗುತ್ತದೆ. ಇಲ್ಲಿಯವರೆಗೆ, ಈ ಕುರಿತು ಎಂಟು ಕ್ಲಿನಿಕಲ್ ಪ್ರಯೋಗಗಳನ್ನು ಮಾಡಲಾಗಿದೆ, ಇದರಲ್ಲಿ ಆಯುಷ್–64 ಅನ್ನು ಮನೆಯಲ್ಲಿ ಕ್ವಾರಂಟೈನ್‌ನಲ್ಲಿರುವ 63 ಸಾವಿರ ರೋಗಿಗಳಿಗೆ ನೀಡಲಾಯಿತು ಮತ್ತು ಈ ಪ್ರಯೋಗದಲ್ಲಿ ಔಷಧವು ಪ್ರಯೋಜನಕಾರಿಯಾಗಿದೆ ಎಂದು ಕಂಡುಬಂದಿದೆ.

Date of Publication 25 NOVEMBER 2021

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-12-2021

पुंगव PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## ಭಾರತೀಯ ಭಾಷೆಗಳ ಉನ್ನತಿಗಾಗಿ ಕೇಂದ್ರ ಸರ್ಕಾರದಿಂದ ಉನ್ನತಾಧಿಕಾರದ ಸಮಿತಿ ರಚನೆ; ಅಧ್ಯಕ್ಷರಾಗಿ ಪದ್ಮಶ್ರೀ ಚ ಮೂ ಕೃಷ್ಣಶಾಸ್ತ್ರೀ ನಿಯುಕ್ತಿ



ಎಲ್ಲಾ ಭಾರತೀಯ ಭಾಷೆಗಳ ಉನ್ನತಿಗಾಗಿ ಕೇಂದ್ರ ಸರ್ಕಾರ 15 ನವೆಂಬರ್ 2021 ರಂದು ರಚಿಸಿರುವ ಉನ್ನತಾಧಿಕಾರದ ಸಮಿತಿಗೆ ಪದ್ಮಶ್ರೀ ಪುರಸ್ಕೃತ ಶ್ರೀ ಚ ಮೂ ಕೃಷ್ಣಶಾಸ್ತ್ರೀ ಅವರು ಅಧ್ಯಕ್ಷರಾಗಿ ನಿಯುಕ್ತಿಗೊಂಡಿದ್ದಾರೆ. ಕೇಂದ್ರ ಶಿಕ್ಷಣ ಇಲಾಖೆಯ ಜಂಟಿ ಕಾರ್ಯದರ್ಶಿ (ಭಾಷೆಗಳು), ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರು ಮತ್ತು ಈ ಸಮಿತಿಗೆ ಅಗತ್ಯ ಸೌಕರ್ಯಗಳನ್ನು ಒದಗಿಸುವ ಹೊಣೆಗಾರಿಕೆ ಇರುವ ದಿಲ್ಲಿಯ ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಯವರು ಪದನಿಮಿತ್ತ ಸದಸ್ಯರಾಗಿರುವ ಈ ಸಮಿತಿಗೆ ತಜ್ಞ ಸದಸ್ಯರನ್ನು ಕಾಲಾನುಕ್ರಮದಲ್ಲಿ ಸಮಿತಿಯ ಅಧ್ಯಕ್ಷರ ಶಿಫಾರಸಿನಂತೆ ನೇಮಿಸಲಾಗುತ್ತದೆ ಎಂದು ಶಿಕ್ಷಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಸಂವಿಧಾನದ 8 ನೆಯ ಪರಿಚ್ಛೇದದಲ್ಲಿರುವ ಭಾಷೆಗಳಲ್ಲದೆ, ಅಪಾಯದ ಅಂಚಿನಲ್ಲಿರುವ ಭಾಷೆಗಳು, ಪರಿಚ್ಛೇದದಲ್ಲಿ ಇಲ್ಲದ ಭಾಷೆಗಳು, ಅಲ್ಪಸಂಖ್ಯಾತ, ಬುಡಕಟ್ಟು ಮತ್ತು ಶಾಸ್ತ್ರೀಯ ಭಾಷೆಗಳ ಕುರಿತಾಗಿ ಈ ಸಮಿತಿಯು ಕೆಲಸ ಮಾಡಲಿದೆ. ಭಾರತೀಯ ಭಾಷೆಗಳ ತಂತ್ರಜ್ಞಾನ ಸಂಬಂಧಿತ ಸಾಧನಗಳು, ಭಾಷಾ ಶಿಕ್ಷಣ, ಭಾಷಾ ವಿದ್ಯಾರ್ಥಿಗಳ ಉದ್ಯೋಗಾವಕಾಶ, ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಭಾರತೀಯ ಭಾಷೆಗಳಿಗೆ ಶಿಕ್ಷಣರಂಗದಲ್ಲಿ ಬೇಕಾದ ನೀಲ ನಕಾಶೆ, ಭಾಷಾ ಸಂಸ್ಥೆಗಳ ಶಕ್ತಿವರ್ಧನೆ, ಭಾಷಾ ಶಿಕ್ಷಣ, ಸಂಶೋಧನೆ, ಭಾಷಾ ದತ್ತ ಸಂಚಯ, ಅನುವಾದ, ಭಾಷಾಂತರ ? ಹೀಗೆ ಸಮಿತಿಯು ವಿಶಾಲ ಕಾರ್ಯಚೌಕಟ್ಟನ್ನು ಹೊಂದಿದೆ.

ಸಮಿತಿಯು ಎರಡು ವರ್ಷಗಳ ಅವಧಿಯಲ್ಲಿ ಸೂಕ್ತ ಸಮಿತಿ / ಉಪ ಸಮಿತಿಗಳನ್ನು ರಚಿಸಿ, ಕಾರ್ಯಕ್ರಮಗಳನ್ನು ನಡೆಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಭಾಷಾಸಂಬಂಧೀ ಸಂಸ್ಥೆಗಳ ಜೊತೆ ಸಮನ್ವಯ ಸಾಧಿಸಿ ಸೂಕ್ತವಾದ ಕ್ರಿಯಾಯೋಜನೆಗಳನ್ನು ರೂಪಿಸುವ ಹೊಣೆಗಾರಿಕೆಯನ್ನು ಹೊಂದಿದೆ.

ಈ ಸಮಿತಿಯ ರಚನೆಯಿಂದ ಕೇಂದ್ರ ಸರ್ಕಾರವು ಎಲ್ಲಾ ಭಾರತೀಯ ಭಾಷೆಗಳ ಬಗ್ಗೆ ತನಗಿರುವ ಕಾಳಜಿಯನ್ನು ವ್ಯಕ್ತಪಡಿಸಿದೆ. ಈ ಸಮಿತಿಯನ್ನು ಸದುಪಯೋಗಪಡಿಸಿಕೊಂಡು ಸಾರ್ವಜನಿಕರು, ಭಾಷಾಭಿಮಾನಿಗಳು, ಭಾಷಾ ತಂತ್ರಜ್ಞರು ಸೂಕ್ತವಾಗಿ ಮತ್ತು ರಚನಾತ್ಮಕವಾಗಿ ಭಾಗವಹಿಸಿ ಸಾವಿರಾರು ಭಾಷೆಗಳ ಸಮೃದ್ಧ ನಾಡಾದ ಭಾರತದಲ್ಲಿ ಸರ್ವಭಾಷಾ ಸಾಮರಸ್ಯ ಮತ್ತು ಸಂವರ್ಧನೆ ? ಎರಡನ್ನೂ ಸಾಧಿಸಲು ಸಾಧ್ಯವಾಗಲಿದೆ.

## ಪಾಕಿಸ್ಥಾನದಲ್ಲಿ ಕೆಡವಲಾಗಿದ್ದ ಹಿಂದೂ ದೇಗುಲ ಪುನರ್ ನಿರ್ಮಾಣ, ಉದ್ಘಾಟನೆ

ಪಾಕಿಸ್ಥಾನದ ಕರಕ್, ಖೈಬರ್–ಪಖ್ತುಂಖ್ವಾ ಪ್ರಾಂತದಲ್ಲಿ ಪುನರ್ ನಿರ್ಮಾಣ ಮಾಡಲಾದ ಶ್ರೀ ಪರಮಹನ್ಸ್ ಜಿ ಮಹಾರಾಜ್ ದೇವಾಲಯವನ್ನು ಅಲ್ಲಿನ ಮುಖ್ಯ ನ್ಯಾಯಮೂರ್ತಿ ಗುಲ್ಜಾರ್ ಅಹ್ಮದ್ ಅವರು ದೀಪಾವಳಿಯ ಸಂದರ್ಭದಲ್ಲಿ ಉದ್ಘಾಟಿಸಿದರು ಮತ್ತು ಈ ವಿಶೇಷ ಸಂದರ್ಭದಲ್ಲಿ ಹಿಂದೂ ಸಮುದಾಯವನ್ನು ಅಭಿನಂದಿಸಿದರು ಎಂದು ಮೂಲಗಳು ವರದಿ ಮಾಡಿವೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಸ್ಥಳೀಯ ಮುಸ್ಲಿಂ ಧರ್ಮಗುರುಗಳು ಮತ್ತು ಇತರರ ನೇತೃತ್ವದ ಉದ್ರಿಕ್ತರ ಗುಂಪೊಂದು ದೇವಾಲಯದ ಮೇಲೆ ದಾಳಿ ಮಾಡಿ ಅದನ್ನು ಸಂಪೂರ್ಣವಾಗಿ ಕೆಡವಿತ್ತು. ಇದೀಗ ಅದನ್ನು ಮತ್ತೆ ಪುನರ್ ನಿರ್ಮಾಣ ಮಾಡಲಾಗಿದೆ.

ಸೋಮವಾರ ಉದ್ಘಾಟನಾ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ನ್ಯಾಯಮೂರ್ತಿ ಗುಲ್ಜಾರ್, ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲು ಪಾಕಿಸ್ಥಾನದ ಸುಪ್ರೀಂಕೋರ್ಟ್ ಯಾವಾಗಲೂ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಮತ್ತು ಭವಿಷ್ಯದಲ್ಲೂ ಅದು ಮುಂದುವರಿಯುತ್ತದೆ ಎಂದು ಹೇಳಿದ್ದಾರೆ. ಸಂವಿಧಾನದ ಪ್ರಕಾರ, ಹಿಂದೂ ಸಮುದಾಯವು ಇತರ ಧರ್ಮಗಳ ಜನರಿಗೆ ಇರುವ ಸಮಾನವಾದ ಹಕ್ಕುಗಳನ್ನು ಹೊಂದಿದೆ ಎಂದು ಅವರು ಒತ್ತಿ ಹೇಳಿದ್ದಾರೆ ಎಂದು ವರದಿಗಳು ತಿಳಿಸಿವೆ. ಪ್ರತಿಯೊಬ್ಬರೂ ತಮ್ಮ ಪವಿತ್ರ ಸ್ಥಳಗಳನ್ನು ಪ್ರೀತಿಸುತ್ತಾರೆ ಮತ್ತು ಯಾರ ಧಾರ್ಮಿಕ ಸ್ಥಳಕ್ಕೂ ಹಾನಿ ಮಾಡುವ ಅಧಿಕಾರ ಯಾರಿಗೂ ಇಲ್ಲ ಎಂದು ಅವರು ಪರೋಕ್ಷವಾಗಿ ಮೂಲಭೂತವಾದಿಗಳಿಗೆ ಚಾಟಿ ಬೀಸಿದ್ದಾರೆ ಎಂದು ವರದಿಯಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಪಾಕಿಸ್ತಾನ್ ಹಿಂದೂ ಕೌನ್ಸಿಲ್‌ನ ಪೋಷಕ ಮತ್ತು ಪಿಟಿಐ ಮುಖಂಡ ರಮೇಶ್ ಕುಮಾರ್, ಕರಕ್ ಘಟನೆಯನ್ನು ಸಕಾಲಿಕವಾಗಿ ಬಗೆಹರಿಸಿದ ಮುಖ್ಯ ನ್ಯಾಯಮೂರ್ತಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಪಾಕಿಸ್ಥಾನದಲ್ಲಿ ಇತರ ನಾಲ್ಕು ಐತಿಹಾಸಿಕ ದೇವಾಲಯಗಳನ್ನು ಪುನರಾರಂಭ ಮಾಡಿದರೆ ಸಾವಿರಾರು ಹಿಂದೂಗಳಿಗೆ ಪ್ರಯೋಜನವಾಗುತ್ತದೆ ಮತ್ತು ಇದು ವಿಶ್ವದಲ್ಲಿ ದೇಶದ ಪ್ರತಿಮೆಯನ್ನು ಸುಧಾರಿಸುತ್ತದೆ ಎಂದು ಕುಮಾರ್ ಹೇಳಿದ್ದಾರೆ.

## ಈಜಿಪ್ಟ್ ನಲ್ಲಿ 4500 ವರ್ಷ ಹಳೆಯ ಸೂರ್ಯ ದೇವಾಲಯ ಪತ್ತೆ



4500 ವರ್ಷಗಳಷ್ಟು ಹಳೆಯದಾದ ಸೂರ್ಯ ದೇವಾಲಯವನ್ನು ಈಜಿಪ್ಟ್‌ನ ರಾಜಧಾನಿ ಕೈರೋದಿಂದ ದಕ್ಷಿಣಕ್ಕೆ 20 ಕಿಲೋಮೀಟರ್ ದೂರದಲ್ಲಿರುವ ಅಬು ಘುರಾಬ್‌ನಲ್ಲಿ ಪತ್ತೆ ಮಾಡಲಾಗಿದೆ. ಈಜಿಪ್ಟ್‌ನ ಪುರಾತತ್ವಶಾಸ್ತ್ರಜ್ಞರು ಕಳೆದುಹೋಗಿದ್ದ ಈ ಸೂರ್ಯ ದೇವಾಲಯವನ್ನು ಪತ್ತೆ ಮಾಡಿದ್ದಾರೆ. ಇದು 4500 ವರ್ಷಗಳಷ್ಟು ಹಳೆಯ ದೇಗುಲ ಎಂದು ನಂಬಲಾಗಿದೆ. ನವೆಂಬರ್ 14 ರಂದು ನ್ಯಾಷನಲ್ ಜಿಯಾಗ್ರಫಿಕ್‌ನಲ್ಲಿ ಪ್ರಸಾರವಾದ "ಲಾಸ್ಟ್ ಟ್ರೆಶರ್ಸ್ ಆಫ್ ಈಜಿಪ್ಟ್" ಶೋನಲ್ಲಿ ಈ ಆವಿಷ್ಕಾರವನ್ನು ತೋರಿಸಲಾಗಿದೆ. 1898 ರಲ್ಲಿ ಅದೇ ಸ್ಥಳದಲ್ಲಿ ಮತ್ತೊಂದು ಸೂರ್ಯ ದೇವಾಲಯವನ್ನು ಕಂಡುಹಿಡಿಯಲಾಗಿತ್ತು. ಈ ಸೂರ್ಯ ದೇವಾಲಯವು 2400 ಮತ್ತು 2370 ಃಅಇ ನಡುವೆ ಈಜಿಪ್ಟ್ ಅನ್ನು ಆಳಿದ 5 ನೇ ರಾಜವಂಶದ ಆರನೇ ರಾಜ ನೂಸೆರ್ರಾನ ಸೂರ್ಯ ದೇವಾಲಯವಾಗಿತ್ತು. ಇಂತಹ ಆರು ಸೂರ್ಯ ದೇವಾಲಯಗಳನ್ನು ನಿರ್ಮಿಸಲಾಗಿದೆ ಎಂದು ಐತಿಹಾಸಿಕ ಮೂಲಗಳು ಸೂಚಿಸುತ್ತವೆ.

ಈ ಹಿಂದೆ, ಪುರಾತತ್ವಶಾಸ್ತ್ರಜ್ಞರು ಉತ್ತರ ಪ್ರದೇಶದ ಪ್ರತಾಪಗಢದಲ್ಲಿ 8 ನೇ ಶತಮಾನದ ಸೂರ್ಯ ದೇವಾಲಯವನ್ನು ಕಂಡುಹಿಡಿದಿದ್ದಾರೆ. ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್ ಸರ್ಕಾರವು ಈ ಪ್ರದೇಶವನ್ನು ಧಾರ್ಮಿಕ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಯೋಜಿಸಿದೆ. ಈ ವರ್ಷ ಜುಲೈನಲ್ಲಿ ಬಿಹಾರದ ಸಹರ್ಸಾ ಜಿಲ್ಲೆಯಲ್ಲಿ ನಡೆದ ಉತ್ಖನನದ ವೇಳೆ ಮೂರು ಅಡಿ ಎತ್ತರದ ಕಪ್ಪು ಕಲ್ಲಿನ ಸೂರ್ಯ ವಿಗ್ರಹ ಪತ್ತೆಯಾಗಿತ್ತು. ವಿಗ್ರಹವು ಎರಡು ಕೈಗಳಲ್ಲಿ ಕಮಲದ ಹೂವುಗಳನ್ನು ಹೊಂದಿದೆ. ವಿಗ್ರಹವು ಪಾಲ ರಾಜವಂಶಕ್ಕೆ (ಕ್ರಿ.ಶ. 750) ಸೇರಿದೆ. ಇಸ್ಲಾಮಿಕ್ ಆಕ್ರಮಣಕಾರರ ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳಲು, ಜನರು ತಮ್ಮ ದೇವತೆಗಳನ್ನು ಭೂಮಿಯ ಕೆಳಗೆ ಹೂಳುತ್ತಿದ್ದರು ಅಥವಾ ಬಾವಿಗಳು ಅಥವಾ ಕೊಳಗಳಲ್ಲಿ ಎಸೆಯುತ್ತಿದ್ದರು. ಬಿಹಾರದ ಸಹರ್ಸಾ ಜಿಲ್ಲೆಯ ಕಥೋ ಪಂಚಾಯತ್‌ನಲ್ಲಿರುವ ಬಾಬಾ ಮಾತೇಶ್ವರ ಧಾಮ್ ದೇವಾಲಯದ ಆವರಣದಲ್ಲಿ ಉತ್ಖನನ ನಡೆದಿದ್ದು, ಅಂತಹ ಉತ್ಖನನದ ಸಮಯದಲ್ಲಿ ವಿಗ್ರಹವು ಪತ್ತೆಯಾಗಿದೆ.


## ಕಳೆದ ವರ್ಷ ಜಾರಿಗೊಳಿಸಿದ್ದ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಿದ ಕೇಂದ್ರ ಸರ್ಕಾರ



ಕಳೆದ ವರ್ಷವಷ್ಟೇ ಜಾರಿಗೊಳಿಸಿದ್ದ ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ರೈತರಿಗೆ ಸ್ಪರ್ಧಾತ್ಮಕ ಬೆಲೆ ದೊರಕಿಸುವ ನಿಟ್ಟಿನಲ್ಲಿ ಎಪಿಎಂಸಿಗಳ ಏಕಸ್ವಾಮ್ಯವನ್ನು ಕೊನೆಗೊಳಿಸಿದ್ದ ಹಾಗೂ ಕಂಪೆನಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಅದಕ್ಕೆ ತಕ್ಕಂತೆ ಬೆಳೆ ಬೆಳೆದು ಉತ್ತಮ ಬೆಲೆ ಗಳಿಸಲು ಅವಕಾಶ ಮಾಡಿಕೊಟ್ಟಿದ್ದ ಈ ಕಾಯ್ದೆಯ ವಿರುದ್ಧ ಕಳೆದ ವರ್ಷದಿಂದ ವಿಶೇಷವಾಗಿ ಪಂಜಾಬಿನ ರೈತರು ಪ್ರತಿಭಟನೆ ನಡೆಸುತ್ತಿದ್ದರು. ರೈತರ ಹೆಸರಿನಲ್ಲಿ ಎಪಿಎಂಸಿಯ ಕಮಿಷನ್ ಏಜೆಂಟ್‌ಗಳು ಪ್ರತಿಭಟನೆ ನಿರತರಾಗಿದ್ದರು ಎಂಬ ಆರೋಪಗಳೂ ಕೂಡ ಕೇಳಿಬಂದಿದ್ದವು. ಇದೇ ಅವಕಾಶವನ್ನು ಉಪಯೋಗಿಸಿಕೊಂಡು, ಸಿಖ್ ಪ್ರತ್ಯೇಕತಾವಾದಿಗಳಾದ ಖಾಲಿಸ್ಥಾನಿಗಳು ಪುನಃ ಪಂಜಾಬಿನಲ್ಲಿ ಸಿಖ್ಖರು ಹಾಗೂ ಉಳಿದ ಹಿಂದೂಗಳ ನಡುವೆ ಬಿರುಕು ಮೂಡಿಸುವ ಪ್ರಯತ್ನ ನಡೆಸಿದ ಆತಂಕಕಾರಿ ಬೆಳವಣಿಗೆಯೂ ನಡೆದಿತ್ತು. ಕಮ್ಯುನಿಸ್ಟ್ ಹಾಗೂ ಕಾಂಗ್ರೆಸ್ ಪಕ್ಷಗಳೂ ಕೂಡ ಈ ಚಳವಳಿಯನ್ನು ರಾಜಕೀಯ ಲಾಭಕ್ಕೋಸ್ಕರ ಬಳಸಿಕೊಂಡು ಕೃಷಿ ಕಾಯ್ದೆಗಳ ಬಗ್ಗೆ ತಪ್ಪು ಮಾಹಿತಿ ನೀಡಿ ಜನರನ್ನು ಎತ್ತಿಕಟ್ಟುವ ಪ್ರಯತ್ನ ನಡೆಸಿದ್ದವು. ಕೇಂದ್ರ ಸರ್ಕಾರ ಚಳವಳಿಯ ನೇತೃತ್ವ ವಹಿಸಿದ್ದ ರೈತ ಪ್ರತಿನಿಧಿಗಳ ಜತೆ ಮಾತನಾಡಿದ್ದರೂ, ಕಾಯ್ದೆಯ ಲಾಭದ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲು ಸಾಧ್ಯವಾಗಿರಲಿಲ್ಲ.

ಈ ಎಲ್ಲ ಬೆಳವಣಿಗೆಗಳ ನಡುವೆ ಅನಗತ್ಯ ವಿವಾದ ತಪ್ಪಿಸಿ, ಪ್ರತ್ಯೇಕತಾವಾದ ಬಲಗೊಳ್ಳುವುದನ್ನು ತಪ್ಪಿಸಲು ಈ ಕಾಯ್ದೆಯನ್ನು ಕೇಂದ್ರ ಸರ್ಕಾರ ಹಿಂತೆಗೆದುಕೊಂಡಿದೆ. ದೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿಯವರು 'ಕೃಷಿಕರಿಗೋಸ್ಕರ ಈ ಕಾನೂನನ್ನು ಕಾನೂನನ್ನು ತಂದೆವು. ಈಗ ದೇಶಕ್ಕೋಸ್ಕರ ಹಿಂತೆಗೆದುಕೊಳ್ಳುತ್ತಿದ್ದೇವೆ' ಎಂದು ಸೂಚ್ಯವಾಗಿ ಹೇಳುವ ಮೂಲಕ ಸುರಕ್ಷೆಗೆ ಇದ್ದ ಆತಂಕದ ಬಗ್ಗೆ ಸುಳಿವು ನೀಡಿದ್ದಾರೆ ಎಂದೇ ಎಲ್ಲೆಡೆ ವಿಶ್ಲೇಷಿಸಲಾಗುತ್ತಿದೆ.

## ಚಂದ್ರಯಾನ–ನಾಸಾ ಆರ್ಬಿಟರ್ ನಡುವೆ ಸಂಭವಿಸಬಹುದಾಗಿದ್ದ ಢಿಕ್ಕಿ ತಪ್ಪಿಸಿದ ಇಸ್ರೋ



ಭಾರತದ ಹೆಮ್ಮೆಯ ಇಸ್ರೋದ ಮುನ್ನೆಚ್ಚರಿಕೆ ಕ್ರಮದಿಂದಾಗಿ ಚಂದ್ರನ ಸುತ್ತ ಸುತ್ತುತ್ತಿರುವ ಬಾಹ್ಯಾಕಾಶ ನೌಕೆಗಳ ನಡುವೆ ಸಂಭವಿಸಬಹುದಾಗಿದ್ದ ಢಿಕ್ಕಿ ತಪ್ಪಿದೆ. ಇಸ್ರೋದ ಚಂದ್ರಯಾನ–2 ಆರ್ಬಿಟರ್ ಮತ್ತು ನಾಸಾದ ಎಲ್ ಆರ್ ಒ ಪರಸ್ಪರ ಡಿಕ್ಕಿಯಾಗುವ ಸಾಧ್ಯತೆ ಇತ್ತು ಎನ್ನಲಾಗಿದೆ.

ಇಸ್ರೋದ ಚಂದ್ರಯಾನ– 2 ಆರ್ಬಿಟರ್ ಮತ್ತು ನಾಸಾದ ಆರ್ಬಿಟರ್‌ಗಳ ಕಕ್ಷೆಗಳು ಸೇರುವ ಸ್ಥಳದಲ್ಲಿ ಕಳೆದ ತಿಂಗಳು ಪರಸ್ಪರ ಡಿಕ್ಕಿ ಹೊಡೆಯುವ ಸಾಧ್ಯತೆ ಇತ್ತು ಎನ್ನಲಾಗಿದೆ. ಆದರೆ ಈ ವಿಷಯವನ್ನು ಮೊದಲೇ ಪತ್ತೆ ಮಾಡಿದ ಇಸ್ರೋ, ಚಂದ್ರಯಾನ ಆರ್ಬಿಟರ್‌ನ ಕಕ್ಷೆಯನ್ನು ತುಸು ಬದಲಾಯಿಸುವ ಮೂಲಕ ದೊಡ್ಡ ಮಟ್ಟದಲ್ಲಿ ಸಂಭವಿಸಬಹುದಾಗಿದ್ದ ಅನಾಹುತವನ್ನು ತಪ್ಪಿಸಿದೆ.

ಅ. 20ರಂದು ಚಂದ್ರನ ಉತ್ತರ ಧ್ರುವದ ಬಳಿ ಈ ಎರಡು ಉಪಗ್ರಹಗಳು ಸುಮಾರು 100 ಮೀ.ಗಳಷ್ಟುಸಮೀಪಕ್ಕೆ ಬರಲಿವೆ ಎಂದು ಅಂದಾಜಿಸಲಾಗಿತ್ತು. ಒಂದು ವೇಳೆ ಎರಡು ಉಪಗ್ರಹಗಳ ನಡುವೆ ಢಿಕ್ಕಿ ಸಂಭವಿಸಿದ್ದರೆ ಎರಡೂ ದೇಶಗಳ ಮಿಶನ್ ಚಂದ್ರಯಾನ ಯೋಜನೆ ವಿಫಲವಾಗುತ್ತಿತ್ತು. ಆದರೆ ಪಥ ಬದಲಿಸಿರುವ ಕಾರಣ ಇನ್ನು ಮುಂದೆ 2 ಆರ್ಬಿಟರ್‌ಗಳು ಸಮೀಪಕ್ಕೆ ಬರುವ ಭೀತಿ ಇಲ್ಲ ಎಂದು ಇಸ್ರೋ ಸ್ಪಷ್ಟಪಡಿಸಿದೆ. ಈ ಬಗ್ಗೆ ಸುಮಾರು ಒಂದು ತಿಂಗಳ ನಂತರ ಇಸ್ರೋ ಮಾಹಿತಿ ಬಿಡುಗಡೆ ಮಾಡಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.